ಕ್ರಾಂತಿಯ ಕಿಡಿ

# ಕಾಯಕ ಯೋಗಿ

ಸಂಪಾದಕರು : ಬಿ.ಕೆ. ಅರುಣಜ್ಯೋತಿ
KAYAKAYOGI - Morning Daily
ಕನ್ನಡ ದಿನಪತ್ರಿಕೆ

| ಮಂಡ್ಯ Mandya | ಸಂಪುಟ - 04 Volume - 04 | ಸಂಚಿಕೆ - 74 Issue - 74 | RNI No.KARKAN/2018/77805 POST NO. KA/SK/MND/999/2019-2021 | ಶನಿವಾರ Saturday | 26-06-2021 | ಪುಟ - 04 Page - 04 | ಬೆಲೆ–ರೂ. 02 Price - 02 | ಸಂಪರ್ಕ 9980605484 | E-mail kayakayoginews@gmail.com |
|---|---|---|---|---|---|---|---|---|---|

ask ಮೈಸೂರು
ಪರಿಸರ, ಪ್ರವಾಸೋದ್ಯಮ, ಆರೋಗ್ಯ, ವ್ಯವಹಾರ, ಕೃಷಿ, ಶಿಕ್ಷಣ, ಜೀವನ ಶೈಲಿ, ಸಂಸ್ಕೃತಿ, ವನ್ಯಜೀವಿಗಳು, ಸಾಧಕರು, ವ್ಯವಹಾರ ಹಾಗೂ ಉತ್ಪನ್ನಗಳ ಮಾಹಿತಿ, ಸುದ್ದಿ ಮತ್ತು ಜಾಹಿರಾತುಗಳು.
FREE CLASSIFIEDS
Visit: askmysuru.com/news
9742 9742 34 askmysuru

# ಇಂದಿರಾ ಉಳಿವಿಗಾಗಿ ತುರ್ತು ಪರಿಸ್ಥಿತಿ

## ದೇಶದ ಜನರಲ್ಲಿ ಕಾಂಗ್ರೆಸ್ ಕ್ಷಮೆ ಕೇಳಬೇಕು : ಸಿಎಂ



ಬೆಂಗಳೂರು : ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ ಕರಾಳ ಶಾಸನ ಬರೆದಿರುವ ಕಾಂಗ್ರೆಸ್ ಪಕ್ಷವು ದೇಶದ ಜನತೆಯ ಕ್ಷಮೆ ಯಾಚಿಸುವ ಮೂಲಕ ತನ್ನ ತಪ್ಪು ಒಪ್ಪಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಒತ್ತಾಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 46 ವರ್ಷಗಳ ಹಿಂದೆ ಇದೇ ದಿನ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಯಾವುದೇ ಕಾರಣ ಇಲ್ಲದೇ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದರು.

ಕೇವಲ ತನ್ನ ಖುರ್ಚಿ ಉಳಿವಿಗಾಗಿ ಇಂತಹ ತೀರ್ಮಾನ ಮಾಡಿದ್ದರು. ದೇಶದ ಅನೇಕ ನಾಯಕರು ಜೈಲುವಾಸ ಅನುಭವಿಸಬೇಕಾಯಿತು. ವಾಕ್ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ ಕಸಿದುಕೊಳ್ಳಲಾಯಿತು. ಇದನ್ನು ಅಂದು ಹಲವು ಪತ್ರಿಕೆಗಳು ಖಂಡಿಸಿ ಪ್ರತಿಭಟಿಸಿದ್ದವು ಎಂದರು.

ತುರ್ತು ಪರಿಸ್ಥಿತಿಯಲ್ಲಿ ಜೈಲು ಸೇರಿದ್ದ ನಟಿ ಸ್ನೇಹಲತಾ ಜೈಲಿನಲ್ಲಿ ಸಾವನ್ನಪ್ಪಿದ್ದರು. ನಾನು ಸೇರಿದಂತೆ ಅನೇಕ ಕಾರ್ಯಕರ್ತರು ಜೈಲುವಾಸ ಅನುಭವಿಸಬೇಕಾಯಿತು. ವಾಜಪೇಯಿ, ಅಡ್ವಾಣಿ, ಜಾರ್ಜ್ ಫರ್ನಾಂಡೀಸ್, ದೇವೇಗೌಡ ಸೇರಿದಂತೆ ಎಲ್ಲರನ್ನೂ ಬಂಧಿಸಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿಟ್ಟಿದ್ದರು.

ನಮ್ಮನ್ನು ಮುಗಿಸುವ ಪ್ರಯತ್ನವೂ ನಡೆದಿತ್ತು. ಆನಂತರ ನಡೆದ ಲೋಕಸಭೆ ಚುನಾವಣೆಯಲ್ಲಿ ಜನ ಅವರನ್ನು ತಿರಸ್ಕರಿಸಿದರು. ಈ ದಿನ ಬಿಜೆಪಿಯಿಂದ ಅಂದು ಬಂಧಿತರಾದವರ ಮನೆಗೆ ಹೋಗಿ ಗೌರವಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಕರಾಳ ಶಾಸನ ಜನಜೀವನದ ಮೇಲೆ ಬೀರಿದ ದುಷ್ಪರಿಣಾಮ 46 ವರ್ಷಗಳಾದ ಮೇಲೆಯೂ ಕಾಣುತ್ತಿದೆ. ಇದಕ್ಕಾಗಿ ಕಾಂಗ್ರೆಸ್ ದೇಶದ ಜನರಲ್ಲಿ ಕ್ಷಮೆ ಕೇಳಬೇಕು ಆ ಮೂಲಕ ಅವರು ಮಾಡಿದ ಅಕ್ಷಮ್ಯ ಅಪರಾಧವನ್ನು ಒಪ್ಪಿಕೊಳ್ಳಬೇಕು ಎಂದರು.

ಇಂದು ಮನೆ ಮನೆಗೆ ಹೋಗಿ ಗುರುತಿಸಿ ಸನ್ಮಾನ ಮಾಡುತ್ತಿರುವ ನಮ್ಮ ಕಾರ್ಯಕರ್ತರಿಗೆ ಧನ್ಯವಾದ ತಿಳಿಸುತ್ತೇನೆ. ಜೈಲಿನಲ್ಲಿದ್ದಾಗ ಅಲ್ಲೇ ನಮ್ಮನ್ನು ಮುಗಿಸೋಕೆ ಪ್ರಯತ್ನ ಮಾಡಿದ್ದನ್ನು ಜೀವನ ಪೂರ್ತಿ ನೆನಪಿಟ್ಟುಕೊಳ್ಳಬೇಕು. ಜಯಪ್ರಕಾಶ್ ನಾರಾಯಣ್ ಪುಣ್ಯಾತ್ಮನ ಹೋರಾಟದಿಂದ ತುರ್ತು ಪರಿಸ್ಥಿತಿ ಅಂತ್ಯ ಆಯಿತು ಎಂದು ಹಳೆಯ ನೆನಪುಗಳನ್ನು ಸಿಎಂ ಮೆಲುಕು ಹಾಕಿದರು.

# ದೇಶದ ಕರಾಳ ತುರ್ತು ಪರಿಸ್ಥಿತಿಗೆ 46ವರ್ಷ

## ಬಿಜೆಪಿಗರಿಂದ ಕರಾಳದಿನ ಆಚರಣೆ



ಮಂಡ್ಯ : ತುರ್ತುಪರಿಸ್ಥಿತಿ ಘೋಷಣೆಯಾದ ಜೂ.25ರ ದಿನದಂದು ಹೋರಾಟಮಾಡಿ ಸೆರೆಮನೆವಾಸಿಗಳಾಗಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘದರನ್ನು ಮತ್ತು ದೇಶಭಕ್ತರನ್ನು ಅಭಿನಂಧಿಸಿ ಗೌರವಿಸುವ ಕರಾಳ ದಿನಾಚರಣೆ ಕಾರ್ಯಕ್ರಮವು ಜಿಲ್ಲಾ ಬಿಜೆಪಿಗರಿಂದ ನಗರದಲ್ಲಿ ನಡೆಯಿತು.

ನಗರದ ನೆಹರು ನಗರವಾಸಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಿರಿಯ ಮುಖಂಡರಾದ ಸಿ.ವಿ. ಶಂಕರರಾವ್ ಜಾವದ್ ಮತ್ತು ಅಶೋಕನಗರವಾಸಿ ವೇಣುಗೋಪಾಲ್ ಅವರ ಮನೆಗಳಿಗೆ ತೆರಳಿದ ಬಿಜೆಪಿಗರು ಅವರನ್ನು ಅಭಿನಂದಿಸಿ ಆಶೀರ್ವಾದ ಪಡೆದರು.

ಬಳಿಕ ಮಾತನಾಡಿದ ಜಿಲ್ಲಾ ಬಿಜೆಪಿ ಮುಖಂಡ ಎಚ್.ಆರ್. ಅರವಿಂದ್ ಅವರು, ಭಾರತದೇಶವು ಎಂದೂ ಮರೆಯದ ತುರ್ತು ಪರಿಸ್ಥಿತಿಯ ಕರಾಳತೆಯನ್ನು ಮುಂದಿನ ಯುವಪೀಳಿಗೆಗೆ ನೆನೆಪಿಸುವ ಅತ್ಯವಶ್ಯಕವಿದೆ, ಮತ್ತೇಂದು ಅಂತಹ ದುರಂತ ಆಡಳಿತದ ದಿನಗಳು ಬಾರದಿರಲಿ ಎಂದು ಹೇಳಿದರು.

ದೇಶದ ಕರಾಳ ತುರ್ತುಪರಿಸ್ಥಿತಿಗೆ 46ವರ್ಷಗಳು ತುಂಬಿವೆ, 1975ರ ರಲ್ಲಿ ಪ್ರಧಾನಮಂತ್ರಿ ಇಂದಿರಾಗಾಂಧಿ ಅವರು ತಮ್ಮ ಪಕ್ಷದ ಆಡಳಿತ ಮತ್ತು ಪ್ರಧಾನಮಂತ್ರಿ ಹುದ್ದೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ರಾಷ್ಟ್ರಪತಿಗಳ ಮೂಲಕ ತುರ್ತು ಪರಿಸ್ಥಿತಿ ಹೇರಿ ಜನಾಕ್ರೋಶಕ್ಕೆ ಕಾರಣವಾದರು ಎಂದು ಸ್ಮರಿಸಿದರು.

ದೇಶದಲ್ಲಿ ಅಂದಿನ ದಿನಗಳಲ್ಲಿ ತಾಂಡವಾಡುತ್ತಿರುವ ಭ್ರಷ್ಟಚಾರ ನಿರುದ್ಯೋಗ ಬೆಲೆಏರಿಕೆ ಸಮಸ್ಯೆಗಳ ವಿರುದ್ಧ ವಿದ್ಯಾರ್ಥಿಗಳು, ಪಕ್ಷಗಳು, ಸಂಘಸಂಸ್ಥೆಗಳು ಪ್ರತಿಭಟನೆಗೆ ಮುಂದಾದಾಗ ಬಂದಿಸಿ 21 ತಿಂಗಳುಗಳ ಕಾಲ ಜೈಲು ಸೇರಿಸಿಬಟ್ಟರು, ಇಂತಹ ಸ್ವಾಭಿಮಾನಿಗಳನ್ನು ಬಿಜೆಪಿ ಪಕ್ಷದಿಂದ ಇಂದು ಅಭಿನಂದಿಸುತ್ತಿದ್ಧೇವೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ನಗರಾಧ್ಯಕ್ಷ ವಿವೇಕ್, ಕರಾಳ ದಿನಾಚರಣೆಯ ಜಿಲ್ಲಾ ಸಂಚಲನಾ ಸಮಿತಿ ಸಂಚಾಲಕರಾದ ಎಂ.ಬಿ.ರಮೇಶ್, ಸಿ.ಟಿ. ಮಂಜುನಾಥ್, ನಗರಸಭಾಸದಸ್ಯ ಅರುಣ್‌ಕುಮಾರ್, ರಾಜೇಶ್, ನವನೀತ್, ನಾಗಣ್ಣಮಲ್ಲಪ್ಪ ಇದ್ದರು.



ಮಂಡ್ಯ ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಕ್ರೀಡಾಪಟುಗಳಿಗೆ ಆಹಾರಧಾನ್ಯಕಿಟ್ ವಿತರಣಾ ಕಾರ್ಯಕ್ಕೆ ಬಿಜೆಪಿ ಜಿಲ್ಲಾ ಪ್ರಭಾರಿ ಎ.ಮಂಜು ಮತ್ತು ಜಿಲ್ಲಾದ್ಯಕ್ಷ ವಿಜಯ್‌ಕುಮಾರ್ ಚಾಲನೆ ನೀಡಿದರು. ಡಾ. ಸಿದ್ದರಾಮಯ್ಯ, ಫುಟ್‌ಬಾಲ್‌ಮಂಜು ಮತ್ತಿತರರಿದ್ದರು.

# ವಿಸಿ ನಾಲೆಗೆ ನೀರು ಬಿಡುಗಡೆಗೊಳಿಸಲು ಆಗ್ರಹ

## ರೈತರಿಂದ ಕೆಆರ್‌ಎಸ್ ಮುತ್ತಿಗೆ ಹಾಕಿ ಪ್ರತಿಭಟನೆ



ಪಾಂಡವಪುರ : ಕೆಆರ್‌ಎಸ್ ಅಚ್ಚುಕಟ್ಟು ಪ್ರದೇಶದ ರೈತರ ಒಣಗುತ್ತಿರುವ ಕಬ್ಬಿನ ಬೆಳೆಗೆ ನೀರುಣಿಸಲು ತಕ್ಷಣವೇ ವಿಶ್ವೇಶ್ವರಯ್ಯ ನಾಲೆಗೆ ನೀರು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ರೈತಸಂಘದ ಕಾರ್ಯಕರ್ತರು ಕೆಆರ್‌ಎಸ್ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಕೆ.ಆರ್.ಎಸ್ ಅಣೆಕಟ್ಟೆಯ ಕಾರ್ಯಪಾಲಕ ಇಂಜನಿಯರ್ ಕಚೇರಿ ಬಳಿ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ ರೈತಸಂಘದ ನೂರಾರು ಕಾರ್ಯಕರ್ತರು, ಮುಂಗಾರು ಮಳೆ ಆರಂಭವಾಗಿದ್ದರೂ ಜಿಲ್ಲೆಯಲ್ಲಿ ಸಮರ್ಪಕವಾಗಿ ಮಳೆ ಬೀಳದೆ ಮಳೆ ಅಭಾವದಿಂದಾಗಿ 45ರಿಂದ 50ಸಾವಿರ ಎಕರೆ ಪ್ರದೇಶದಲ್ಲಿ ಬೆಳೆದಿರುವ ಕಬ್ಬು ಒಣಗುತ್ತಿದೆ. ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು ತಕ್ಷಣವೇ ನೀರು ಬಿಡುಗಡೆ ಮಾಡಬೇಕು. ಜಿಲ್ಲೆಯ ಬಂಗಾರದೊಡ್ಡಿ, ಚಿಕ್ಕದೇವರಾಯ ಹಾಗೂ ವಿರಿಜಾ ನಾಲೆಗೆ ನೀರು ಬಿಡುಗಡೆ ಮಾಡಿರುವ ಜಿಲ್ಲಾಡಳಿತ ವಿಶ್ವೇಶ್ವರಯ್ಯ ನಾಲೆಗೆ ನೀರು ಬಿಡುಗಡೆ ಮಾಡಿಲ್ಲ. ಹೀಗಾಗಿ ರೈತರ ಬೆಳೆ ಒಣಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ನೀರಾವರಿ ನಿಗಮದ ಮುಖ್ಯ ಇಂಜನಿಯರ್ ಹಾಗೂ ಸೂಪರಿಂಡೆಂಟ್ ಇಂಜನಿಯರ್ ಜತೆ ದೂರವಾಣಿ ಮೂಲಕ ಮಾತನಾಡಿದ ವೇಳೆ ಜಿಲ್ಲಾ ಉಸ್ತುವಾರಿ ಸಚಿವರು ನೀರು ಬಿಡುಗಡೆ ಮಾಡಲು ಒಪ್ಪಿದರೆ ನೀರು ಬಿಡಲಾಗುವುದು ಎಂದು ತಿಳಿಸಿದ್ದಾರೆ. ಹೀಗಾಗಿ 1 ಕಟ್ಟು ನೀರು ಬಿಟ್ಟು ರೈತರ ಬೆಳೆ ರಕ್ಷಣೆ ಮಾಡಬೇಕು ಎಂದು ಒತ್ತಾಯಿಸಿದರು.

**ರೈತರ ಬದುಕಿನ ಜತೆ ಸರ್ಕಾರ ಚೆಲ್ಲಾಟ :** ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ ಮಾತನಾಡಿ, ನಾಲೆಗಳಿಗೆ ನೀರು ಹರಿಸದೆ ತಮಿಳುನಾಡಿಗೆ ನೀರು ಬಿಡುಗಡೆ ಮಾಡುವ ಮೂಲಕ ರಾಜ್ಯ ಸರ್ಕಾರ ರೈತರ ಬದುಕಿನ ಜತೆ ಚೆಲ್ಲಾಟವಾಡುತ್ತಿದೆ. ಈ ಮೊದಲೇ ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿಯಾಗದೆ ತೀವ್ರ ಸಂಕಷ್ಟದಲ್ಲಿದ್ದಾರೆ. ಜತೆಗೆ ಇದೀಗ ನೀರಿಲ್ಲದೇ ಬೆಳೆದ ಬೆಳೆಗಳನ್ನೂ ಉಳಿಸಿಕೊಳ್ಳಲು ರೈತರು ಬೀದಿಗಿಳಿದು ಹೋರಾಡುವಂತಾಗಿದೆ. ನಿಗಮದ ಇಂಜನಿಯರ್‌ಗಳು ವೈಜ್ಞಾನಿಕವಾಗಿ ಕೆಲಸ ಮಾಡದಿರುವುದರಿಂದ ವಿ.ನಾಲೆ ಕಡೆ ಭಾಗದ ರೈತ ರ ಜಮೀನುಗಳಿಗೆ ನೀರು ಹರಿಸ ಲು ಸಮಸ್ಯೆಯಾಗಿದೆ. ಹೀಗಾಗಿ ಯಾವ ಸಬೂಬು ಹೇಳದೇ ತಕ್ಷಣ ಎಲ್ಲಾ ಕಾಲುವೆಗಳಿಗೂ ನೀರು ಹರಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಸ್ಥಳಕ್ಕೆ ಆಗಮಿಸಿದ ಪ್ರಭಾರ ಕಾರ್ಯಪಾಲಕ ಇಂಜಿನಿಯರ್ ಹೊನ್ನರಾಜು, ಸೂಪರಿಂಡೆಂಟ್ ಇಂಜನಿಯರ್ ಜತೆ ಮಾತುಕತೆ ನಡೆಸಿದ್ದು, ಅವರು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿದ್ದು, ವಿ.ನಾಲೆ ಗೇಟ್‌ಗಳು ರಿಪೇರಿಯಲ್ಲಿರುವುದರಿಂದ ಎರಡು ದಿನಗಳ ಕಾಲಾವಕಾಶ ನೀಡಬೇಕೆಂದು ಕೋರಿದರು. ಶನಿವಾರ ಸಂಜೆ ಅಥವಾ ಭಾನುವಾರ ಬೆಳಗ್ಗೆ ನೀರು ಬಿಡುವುದಾಗಿ ನೀಡಿದ ಭರವಸೆ ಮೇರೆಗೆ ಪ್ರತಿಭಟನೆ ಅಂತ್ಯಗೊಳಿಸಿದರು.

ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಕೇಂದ್ರ ಸರ್ಕಾರ ರೈತರ ಕತ್ತು ಹಿಸುಕುವ ಕೆಲಸ ಮಾಡುತ್ತಿದೆ. ಹೀಗಾಗಿ ರೈತಸಂಘ ರಾಜಭವನ ಚಲೋ ಕಾರ್ಯಕ್ರಮ ಹಮ್ಮಿಕೊಂಡಿದ್ದು ಎಲ್ಲ ರೈತ ಮುಖಂಡರು ಆಯಾಯಾ ತಾಲೂಕು ಕೇಂದ್ರಗಳಲ್ಲಿ ತಾಲೂಕು ಕಚೇರಿ ರಜೆ ಇದ್ದಲ್ಲಿ ಅಂಬೇಡ್ಕರ್ ಅಥವಾ ರಾಷ್ಟ್ರನಾಯಕರ ಪುತ್ಥಳಿಗಳ ಮುಂದೆ ಸಾಂಕೇತಿಕ ಪ್ರತಿಭಟನೆ ನಡೆಸಬೇಕು ಎಂದು ಕರೆ ನೀಡಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಶ್ರೀರಂಗಪಟ್ಟಣ ತಾಲೂಕು ಅಧ್ಯಕ್ಷ ಕೃಷ್ಣೇಗೌಡ,ಪಾಂಡವಪುರ ತಾಲೂಕು ಅಧ್ಯಕ್ಷ ಚಿಕ್ಕಾಡೆ ಹರೀಶ್, ಪ್ರಧಾನ ಕಾರ್ಯದರ್ಶಿ ಕೆನ್ನಾಳು ವಿಜಯಕುಮಾರ್, ಗೌರವಾಧ್ಯಕ್ಷ ಡಿ.ಕೆ.ಸ್ವಾಮಿಗೌಡ, ಮುಖಂಡರಾದ ಹರವು ಗೋವಿಂದರಾಜು, ಮಾಕೇಗೌಡ, ಶಂಭೂನಹಳ್ಳಿ ಕಾಳೇಗೌಡ, ಮಂಜು, ರಘು ಇತರರು ಭಾಗವಹಿಸಿದ್ದರು.

## ಆಡಳಿತ ಉಪಕ್ರಮ : ಆನ್‌ಲೈನ್ ಉಪನ್ಯಾಸ

ಮಂಡ್ಯ : ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ (ವಿಜಯಪುರ) ಮಂಡ್ಯ ಕೇಂದ್ರದ ವಾಣಿಜ್ಯ ಶಾಸ್ತ್ರ ವಿಭಾಗದ ವತಿಯಿಂದ ಕಾರ್ಪೋರೇಟರ್ ವ್ಯವಹಾರಗಳ ಸಚಿವಾಲಯದ ಆಡಳಿತ ಉಪಕ್ರಮ ವಿಷಯ ಕುರಿತು ಒಂದು ದಿನದ ಆನ್‌ಲೈನ್ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿ ಸಲಾಯಿತು.

ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ವ್ಯವಹಾರಗಳ ಸಚಿವಾಲಯ ಎಂಬ ವಿಷಯದಲ್ಲಿ ಎಂಸಿಎ ಪೋಟರ್‌ನಲ್ಲಿ ದೊರೆಯು ವಂತಹ ಸೇವೆಗಳ ಬಗ್ಗೆ ವಿಸ್ತಾರವಾಗಿ ತಿಳಿಸಿಕೊಟ್ಟರು.

ಹೊಸ ಕಂಪನಿಗಳ ಸ್ಥಾಪನೆ, ಹೊಸದಾಗಿ ಬರುವ ತಿದ್ದುಪಡಿಗಳನ್ನು ಕಂಪನಿಗಳ ಬಗ್ಗೆ ನೈಜ ಹಾಗೂ ನಿಖರವಾದ ಮಾಹಿತಿಗಳನ್ನು ಎಂ.ಸಿ.ಎ.ಪೋಟರ್‌ನಲ್ಲಿ ಪರಿಶೀಲಿಸುವ ಬಗ್ಗೆಯನ್ನು ವಿದ್ಯಾರ್ಥಿನಿಯರಿಗೆ ಸುಲಭವಾಗಿ ಸಾಕ್ಷ್ಯಚಿತ್ರದ ಮೂಲಕ ತಿಳಿಸಿಕೊಟ್ಟರು.

ಕಂಪನಿಯ ನೋಂದಣಿ ಮತ್ತು ಸಂಯೋಜನೆ ಕುರಿತು ಮಾತನಾಡಿದ ಅವರು, ಆನ್‌ಲೈನ್ ಮುಖಾಂತರ ಕಂಪನಿಯ ನೊಂದಾಣಿ ಮಾಡುವ ಹಾಗೂ ಯಾವು ದೇ ಕಂಪನಿಗಳ ಮಾಹಿತಿ ಮತ್ತು ದಾಖಲೆಗಳನ್ನು ಸುಲಭವಾಗಿ ಪಡೆಯುವುದರ ಬಗ್ಗೆ ವಿದ್ಯಾರ್ಥಿನಿಯರಿಗೆ ತಿಳಿಸಿ ಕೊಟ್ಟರು. ಕಂಪನಿ ಕಾಯಿದೆ 2013 ತಿದ್ದುಪಡಿಗಳ ಬಗ್ಗೆ ಮುಖ್ಯ ಮಾಹಿತಿಗಳನ್ನು ಒದಗಿಸಿಕೊಟ್ಟರು.

ಮಹಿಳಾ ವಿವಿ ಕೇಂದ್ರದ ವಿಶೇಷಾಧಿಕಾರಿ ಪ್ರೊ.ಎಚ್. ಎಂ.ಹೇಮಲತಾ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಗಣೇಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಅಕ್ಕಮಹಾದೇವಿ ಮಹಿಳಾ ವಿವಿಯ ಎಲ್ಲಾ ಭೋದಕ ಹಾಗೂ ಭೋದಕೇತರ ಸಿಬ್ಬಂದಿಗಳು ಹಾಗೂ ವಿದ್ಯಾ ರ್ಥಿನಿಯರು ಭಾಗವಹಿಸಿ ವಿಷಯದ ಬಗ್ಗೆ ಚರ್ಚೆ ನಡೆಸಿದರು.

## ನಿಜಗುಣ ಸ್ವಾಮೀಜಿಗೆ ಡಾ.ಕಲಬುರ್ಗಿ ಪ್ರಶಸ್ತಿ



ಬೆಂಗಳೂರು : ಲಂಡನ್‌ನ ಬಸವ ಅಂತರ ರಾಷ್ಟ್ರೀಯ ಪ್ರತಿ ಷ್ಠಾನದ ಸಹಕಾರದಲ್ಲಿ ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ ಹಾಗೂ ಜಾನಪದ ಸಂಶೋಧನ ಕೇಂದ್ರದ ಆಶ್ರಯದಲ್ಲಿ ನೀಡುವ ಡಾ. ಎಂ.ಎಂ.ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿಯು ಈ ಬಾರಿ ಮುಂಡರಗಿ ತೋಂಟದಾರ್ಯ ನಿಜಗುಣ ಪ್ರಭು ಸ್ವಾಮೀಜಿ ಅವರಿಗೆ ಲಭಿಸಿದೆ.

ಈ ವಿಷಯ ಕುರಿತು ಶುಕ್ರವಾರ ಮಾಹಿತಿ ನೀಡಿದ ಪ್ರತಿಷ್ಠಾನದ ಸದಸ್ಯ ಬಿ.ಎಲ್.ಪಾಟೀಲ, 'ಪ್ರಶಸ್ತಿಯು 25ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಜೂನ್ 27ರಂದು ಸಂಜೆ 4ಕ್ಕೆ ನಗರದ ಜಾನಪದ ಸಂಶೋಧನಾ ಕೇಂದ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ' ಎಂದರು.

'ವೈಚಾರಿಕ ಚಿಂತಕ ಡಾ. ಎಂ.ಎಂ.ಕಲಬುರ್ಗಿ ಅವರ ಹತ್ಯೆ ಯಾದ ನಂತರ ಅವರ ಹೆಸರಿನಲ್ಲಿ ಪ್ರಗತಿಪರ ಚಿಂತಕ ಪ್ರಶಸ್ತಿಯನ್ನು ನೀಡಲು ಬಸವ ಅಂತರ ರಾಷ್ಟ್ರೀಯ ಪ್ರತಿಷ್ಠಾನವು ಆರಂಭಿಸಿತು. ಮೌಢ್ಯತೆ ಮತ್ತು ಮೂಢ ನಂಬಿಕೆಗಳ ವಿರುದ್ಧ ನಿರಂತರ ವಾಗಿ ಕೆಲಸ ಮಾಡುತ್ತಿರು ವವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಈವರೆಗೂ ಎಂ.ಎಸ್.ಆಶಾದೇವಿ, ಜಿ.ಕೆ. ಗೋವಿಂದರಾವ್ ಹಾಗೂ ಇತರರಿಗೆ ಈ ಪ್ರಶಸ್ತಿ ಲಭಿಸಿದೆ' ಎಂದರು.

'ಪ್ರಶಸ್ತಿ ಪ್ರದಾನ ಸಮಾರಂಭದ ನೇತೃತ್ವವನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಗೊ.ರು.ಚನ್ನಬಸಪ್ಪ ವಹಿಸಲಿದ್ದಾರೆ. ಅತಿಥಿಗಳಾಗಿ ವಿಮರ್ಶಕಿ ಪ್ರೊ. ಎಂ.ಎಸ್. ಆಶಾದೇವಿ, ಉಮಾದೇವಿ ಕಲಬುರ್ಗಿ ಪಾಲ್ಗೊಳ್ಳಲಿದ್ದಾರೆ. ಸಾಹಿತಿ ಡಾ.ಬಾಳಣ್ಣ ಶೀಗಿಹಳ್ಳಿ ಪ್ರಶಸ್ತಿ ಪ್ರದಾನ ಮಾಡುವರು. ಲಂಡನ್ ಬಸವ ಅಂತರ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಮಹಾದೇವಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಆಶಯ ನುಡಿಗಳ ನ್ನಾಡುವರು' ಎಂದು ಹೇಳಿದರು.

'ಕಾರ್ಯಕ್ರಮವು ಆನ್ ಲೈನ್ ಮೂಲಕ ನಡೆಯಲಿದ್ದು, ಜೂಮ್ ಮೀಟಿಂಗ್ ಕೋಡ್– 8791 8767720 ಲಿಂಕ್ ಮೂಲಕ ನೇರಪ್ರಸಾರವನ್ನು ವೀಕ್ಷಿಸಬಹುದಾಗಿದೆ. ವೀಕ್ಷಣೆಗೆ ಪಾಸ್‌ವರ್ಡ್–2021 ಬಳಕೆ ಮಾಡಬಹುದು' ಎಂದರು.

ಜಾನಪದ ಸಂಶೋಧನಾ ಕೇಂದ್ರದ ಬಸಲಿಂಗಯ್ಯ ಹಿರೇಮಠ, ವಿಶ್ವೇಶ್ವರಿ ಹಿರೇಮಠ ಇದ್ದರು.

## ಮನ್‌ಮುಲ್ ಹಗರಣ : ಸಿಬಿಐ ತನಿಖೆಗೆ ಆಗ್ರಹ



ಮಂಡ್ಯ : ಹಸುಗಳನ್ನೇ ಸಾಕದ ಕೆಲವರು ಮನ್ಮುಲ್‌ನಲ್ಲಿ ನಿರ್ದೇಶಕರಾಗಿದ್ದಾರೆ, ಹೀಗಿರುವಾಗ ಹಾಲಿಗೆ ನೀರು ಬೆರೆಸಿರುವ ಹಗರಣ ತನಿಖೆಯನ್ನು ಸಿಐಡಿ ತನಿಖೆಗೆ ವಹಿಸಿರುವ ಸರ್ಕಾರದ ನಡೆ ಖಂಡನೀಯ, ಇದರಿಂದ ನ್ಯಾಯ ಸಿಗುವುದಿಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘ (ಮೂಲ ಸಂಘಟನೆ)ದ ಜಿಲ್ಲಾಧ್ಯಕ್ಷ ಬೋರಾಪುರ ಶಂಕರೇಗೌಡ ಆರೋಪಿಸಿದರು.

ಮನ್ಮುಲ್ ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು. ಸಿಐಡಿ ತನಿಖೆಯಿಂದ ನ್ಯಾಯ ಸಿಗುವುದಿಲ್ಲ. ಪ್ರಸ್ತುತ ಮನ್ಮುಲ್ ಆಡಳಿತ ಮಂಡಳಿಯ ಕೈವಾಡವು ಹಾಲಿಗೆ ನೀರು ಬೆರೆಸಿರುವ ಹಗರಣದಲ್ಲಿ ಕೈವಾಡವಿದೆ. ಹಸುಗಳನ್ನೇ ಸಾಕದ ಕೆಲವರು ನಿರ್ದೇಶಕರಾಗಿದ್ದಾರೆ, ಇವರು ಕೋಟಿ ಕೋಟಿ ಹಣ ಸುರಿದು ಅಧಿಕಾರಕ್ಕೆ ಬಂದಿದ್ದಾರೆ, ಇವರಿಂದ ರೈತರಿಗೆ ನ್ಯಾಯ ಸಿಗುತ್ತದೆ ಎಂಬುದು ಅಸಾಧ್ಯ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ಮೈಷುಗರ್ ಕಾರ್ಖಾನೆ ಆರಂಭಿಸುವ ವಿಚಾರದಲ್ಲಿ ಸರ್ಕಾರ ಬೇಜವಾಬ್ದಾರಿ ತೋರುತ್ತಿದೆ. ಕಬ್ಬಿಗೆ ಬೆಂಬಲ ಬೆಲೆ ಪ್ರತಿ ಟನ್‌ಗೆ 4 ಸಾವಿರ ರೂಪಾಯಿ ಘೋಷಣೆ ಮಾಡಬೇಕು. ಕೋವಿಡ್ 2ನೇ ಅಲೆ ಸಂದರ್ಭದಲ್ಲಿಯೂ ಖಾಸಗಿಗೆ ಗುತ್ತಿಗೆ ನೀಡಲು ಟೆಂಡರ್ ಕರೆಯಲು ಪ್ರಯತ್ನಿಸುತ್ತಿದೆ. ಆ ಮೂಲಕ ಚಳವಳಿಗಾರರು ಮತ್ತು ಕಾರ್ಖಾನೆ ವ್ಯಾಪ್ತಿಯ ರೈತರನ್ನು ದಿಕ್ಕುತಪ್ಪಿಸುವ ಕೆಲಸ ಮಾಡುತ್ತಿದೆ. ಈ ನೀತಿ ಕೈಬಿಟ್ಟು ಸರ್ಕಾರಿ ಸ್ವಾಮ್ಯದಲ್ಲಿಯೇ ನಡೆಸುವಂತಾಗಬೇಕು ಎಂದು ಒತ್ತಾಯಿಸಿದರು.

ಸಂಘದ ಕಾರ್ಯಾಧ್ಯಕ್ಷ ಇಂಡುವಾಳು ಚಂದ್ರಶೇಖರ್ ಮಾತನಾಡಿ, ಮನ್ಮುಲ್ ಹಗರಣದಲ್ಲಿ 26 ಜನರ ಮೇಲೆ ದೂರು ದಾಖಲಾಗಿದೆ. ಆದರೆ, ಹಾಲು ಸರಬರಾಜು ವಿಭಾಗ ಮತ್ತು ಇಂಜಿನಿಯರ್ ವಿಭಾಗದ ತನಿಖೆ ಆಗದಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಈ ಎರಡೂ ವಿಭಾಗದ ಮೇಲೂ ತನಿಖೆ ಆಗಬೇಕು. ಪ್ರಸ್ತುತ ಆಡಳಿತ ಮಂಡಳಿಯನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಮಂಜೇಶ್ ಗೌಡ, ಉಪಾಧ್ಯಕ್ಷ ನಗರಕೆರೆ ಶ್ರೀಧರ್, ಮುಖಂಡರಾದ ಎಚ್.ಶ್ರೀಧರ್, ಚಿಕ್ಕೀರಪ್ಪ, ಕೆ.ನಾಗೇಂದ್ರ ಸ್ವಾಮಿ, ಬಸವರಾಜು ಇದ್ದರು.

## ಮಂಡ್ಯ ಕೊರೊನಾ ಮೀಟರ್

**ಕೊರೋನಾ ಸೋಂಕು : 119 – ಸಾವು : 03**



ಮಂಡ್ಯ : ಜಿಲ್ಲೆಯ ವಿವಿಧ ತಾಲ್ಲೂಕುಗಳ 119 ಮಂದಿಗೆ ಶುಕ್ರವಾರ ಕೊರೋನಾ ಸೋಂಕು ದೃಢಪಟ್ಟಿದ್ದು, 3 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ರೋಗಿಗಳಿಗೆ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ.

ಮಂಡ್ಯ–33, ಮದ್ದೂರು–25, ಮಳವಳ್ಳಿ–10, ಪಾಂಡವಪುರ–03, ಶ್ರೀರಂಗಪಟ್ಟಣ–19, ಕೆ.ಆರ್.ಪೇಟೆ–16 ನಾಗಮಂಗಲ–12 ಮಂದಿಗೆ ಕೊರೋನಾ ಸೋಂಕು ಕಾಣಿಸಿಕೊಂಡಿದೆ. ಈ ದಿನ 252 ಮಂದಿ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಜಿಲ್ಲೆಯಲ್ಲಿ 1533 ಸಕ್ರಿಯ ಪ್ರಕರಣಗಳಿವೆ. ಸರ್ಕಾರಿ ಆಸ್ಪತ್ರೆಯಲ್ಲಿ 227, ಕೋವಿಡ್‌ಕೇರ್ ಸೆಂಟರ್‌ನಲ್ಲಿ 482, ಖಾಸಗಿ ಆಸ್ಪತ್ರೆಯಲ್ಲಿ 35 ಮನೆಯಲ್ಲಿ 789 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪುಟ–2

ಕ್ರಾಂತಿಯಕಿಡಿ
ಕಾಯಕಯೋಗಿ
KAYAKAYOGI-MORNING DAILY ಕನ್ನಡ ದಿನಪತ್ರಿಕೆ

ಶನಿವಾರ
26 ಜೂನ್ 2021

## ಕೊರೊನಾ 2ನೇ ಅಲೆ ವೇಳೆ ದೇಶದಲ್ಲಿ 776 ವೈದ್ಯರ ಸಾವು, ಬಿಹಾರದಲ್ಲಿ ಗರಿಷ್ಠ: ಏಮ್ಸ್

ನವದೆಹಲಿ: ಮಾರಕ ಕೊರೋನಾ ವೈರಸ್ ಸಾಂಕ್ರಾಮಿಕದ 2ನೇ ಅಲೆ ವೇಳೆ ದೇಶಾದ್ಯಂತ ಸುಮಾರು 776 ಮಂದಿ ವೈದ್ಯರು ಸೋಂಕಿಗೆ ತುತ್ತಾಗಿ ಸಾವನ್ನಪ್ಪಿದ್ದು, ಈ ಪೈಕಿ ಬಿಹಾರ ರಾಜ್ಯದಲ್ಲಿ ಗರಿಷ್ಠ ಅಂದರೆ 115 ವೈದ್ಯರು ಸಾವನ್ನಪ್ಪಿದ್ದಾರೆ ಎಂದು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್) ಮಾಹಿತಿ ನೀಡಿದೆ.

ದೇಶಾದ್ಯಂತ 2ನೇ ಅಲೆಯಲ್ಲಿ ಕೊರೋನಾ ಸೋಂಕಿಗೆ ತುತ್ತಾಗಿ ಸಾವನ್ನಪ್ಪಿದ ವೈದ್ಯರ ಕುರಿತ ದತ್ತಾಂಶಗಳನ್ನು ಏಮ್ಸ್ ನೀಡಿದ್ದು, ದೇಶಾದ್ಯಂತ 776 ಮಂದಿ ವೈದ್ಯರು ಸೋಂಕಿಗೆ ತುತ್ತಾಗಿ ಸಾವನ್ನಪ್ಪಿದ್ದಾರೆ. ಈ ಪೈಕಿ ಬಿಹಾರ ಪಟ್ಟಿಯಲ್ಲಿ ಅಗ್ರ


IMA COVID REGISTRY- SECOND WAVE
STATE WISE DOCTORS MARTYRS

| S. No | States | Number of Death |
|---|---|---|
| 01 | Andhra Pradesh | 40 |
| 02 | Assam | 10 |
| 03 | Bihar | 115 |
| 04 | Chhattisgarh | 7 |
| 05 | Delhi | 109 |
| 06 | Gujarat | 39 |
| 07 | Goa | 2 |
| 08 | Haryana | 19 |
| 09 | Jammu and Kashmir | 3 |
| 10 | Jharkhand | 39 |
| 11 | Karnataka | 9 |
| 12 | Kerala | 24 |
| 13 | Madhya Pradesh | 16 |
| 14 | Maharashtra | 23 |
| 15 | Manipur | 6 |
| 16 | Odisha | 34 |
| 17 | Pondicherry | 1 |
| 18 | Punjab | 3 |
| 19 | Rajasthan | 44 |
| 20 | Tamil Nadu | 50 |
| 21 | Telangana | 37 |
| 22 | Tripura | 2 |
| 23 | Uttar Pradesh | 79 |
| 24 | Uttarakhand | 2 |
| 25 | West Bengal | 62 |
| 26 | Unknown | 1 |
| | Total Martyrs | 776 |

ಸ್ಥಾನದಲ್ಲಿದೆ. ಬಿಹಾರದಲ್ಲಿ ಗರಿಷ್ಠ ಅಂದರೆ 115 ವೈದ್ಯರು ಸಾವನ್ನಪ್ಪಿದ್ದು, ದೆಹಲಿಯ 109 ವೈದ್ಯರು ಸಾವನ್ನಪ್ಪಿದ್ದಾರೆ.


ಉಳಿದಂತೆ ಉತ್ತರ ಪ್ರದೇಶದಲ್ಲಿ 79 ಮಂದಿ ವೈದ್ಯರು ಸಾವನ್ನಪ್ಪಿದ್ದು, ಕರ್ನಾಟಕದಲ್ಲಿ 9 ಮಂದಿ ವೈದ್ಯರು ಸೋಂಕಿಗೆ ಬಲಿಯಾಗಿದ್ದಾರೆ ಎಂದು ಮಾಹಿತಿ ನೀಡಿದೆ.

ಇನ್ನು ಕಳೆದ ಮೊದಲ ಅಲೆಯಲ್ಲಿ ದೇಶದಲ್ಲಿ 748 ವೈದ್ಯರು ಸೋಂಕಿಗೆ ತುತ್ತಾಗಿ ಸಾವನ್ನಪ್ಪಿದ್ದರು. ಪ್ರಸ್ತುತ ಐಎಂಎ ಬಳಿ 3.5 ಲಕ್ಷ ಕಾರ್ಯನಿರತ ವೈದ್ಯ ಸದಸ್ಯರ ದತ್ತಾಂಶವಿದ್ದು, ಇಂದು ದೇಶಾದ್ಯಂತ 12ಲಕ್ಷಕ್ಕೂ ಅಧಿಕ ವೈದ್ಯರು ಕೋವಿಡ್ ಸಾಂಕ್ರಾಮಿಕದ ವೇಳೆ ಸೇವೆ ಸಲ್ಲಿಸುತ್ತಿದ್ದಾರೆ ಎನ್ನಲಾಗಿದೆ.

# ವಿಧಾನಸೌಧದ ಆವರಣದಲ್ಲಿ ಬಸವಣ್ಣನ ಪ್ರತಿಮೆ ನಿರ್ಮಾಣ






09/06/2021 ಟಿಪ್ಪಣಿ

12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವಕ್ಕೆ ಬುನಾದಿ ಹಾಕಿದ ಸಮಾನತೆಯ ಹರಿಕಾರ ಜಗಜ್ಯೋತಿ ಶ್ರೀ ಬಸವಣ್ಣನವರ ಪುತ್ಥಳಿಯನ್ನು ಪ್ರಜಾಪ್ರಭುತ್ವದ ದೇಗುಲವಾದ ವಿಧಾನಸೌಧದ ಆವರಣದಲ್ಲಿ ನಿರ್ಮಿಸುವುದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮುಕುಟಪ್ರಾಯವಾಗುತ್ತದೆ.

ಆದ್ದರಿಂದ ವಿಧಾನಸೌಧದ ಆವರಣದಲ್ಲಿ ಜಗಜ್ಯೋತಿ ಶ್ರೀ ಬಸವಣ್ಣನವರ ಪುತ್ಥಳಿಯನ್ನು ಸ್ಥಾಪಿಸಲು ಸೂಕ್ತ ಪ್ರಸ್ತಾವನೆಯೊಂದಿಗೆ ಕಡತವನ್ನು ಮಂಡಿಸಲು ಸೂಚಿಸಿದೆ.

(ಬಿ.ಎಸ್. ಯಡಿಯೂರಪ್ಪ)

ಬೆಂಗಳೂರು : ಕರ್ನಾಟಕದ ಆಡಳಿತ ಶಕ್ತಿ ಕೇಂದ್ರ ವಿಧಾನಸೌಧದ ಆವರಣದಲ್ಲಿ ಬಸವಣ್ಣನ ಪ್ರತಿಮೆ ನಿರ್ಮಾಣವಾಗಲಿದೆ. ಪುತ್ಥಳಿ ನಿರ್ಮಾಣ ಮಾಡಲು ಕಡತವನ್ನು ಮಂಡನೆ ಮಾಡಲು ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಆದೇಶಿಸಿದ್ದಾರೆ.

9/6/2021ರಂದು ಮುಖ್ಯಮಂತ್ರಿಗಳು ಈ ಕುರಿತ ಟಿಪ್ಪಣಿಗೆ ಸಹಿ ಹಾಕಿದ್ದಾರೆ. ವಿಧಾನ ಸೌಧದ ಆವರಣದಲ್ಲಿ ಜಗಜ್ಯೋತಿ ಶ್ರೀ ಬಸವಣ್ಣನವರ ಪುತ್ಥಳಿಯನ್ನು ಸ್ಥಾಪಿಸಲು ಸೂಕ್ತ ಪ್ರಸ್ತಾವನೆಯೊಂದಿಗೆ ಕಡತವನ್ನು ಮಂಡಿಸಲು ಸೂಚನೆ ನೀಡಿದ್ದಾರೆ.

**ವಿಶ್ವಗುರು ಬಸವಣ್ಣ ಆಗಲೂ ಈಗಲೂ ಪ್ರಸ್ತುತ!** : 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವಕ್ಕೆ ಬುನಾದಿ ಹಾಕಿದ ಸಮಾನತೆಯ ಹರಿಕಾರ ಜಗಜ್ಯೋತಿ ಶ್ರೀ ಬಸವಣ್ಣನವರ ಪುತ್ಥಳಿಯನ್ನು ಪ್ರಜಾ ಪ್ರಭುತ್ವದ ದೇಗುಲವಾದ ವಿಧಾನಸೌಧದ ಆವರಣದಲ್ಲಿ ನಿರ್ಮಿಸುವುದರಿಂದ ಪ್ರಜಾ ಪ್ರಭುತ್ವ ವ್ಯವಸ್ಥೆಗೆ ಮುಖುಟಪ್ರಾಯವಾಗುತ್ತದೆ ಎಂದು ಟಿಪ್ಪಣಿಯಲ್ಲಿ ಹೇಳಿದ್ದಾರೆ.

ತುಮಕೂರಿನ ಸಿದ್ಧಗಂಗಾ ಮಠ ಮುಖ್ಯ ಮಂತ್ರಿಗಳ ಪ್ರಸ್ತಾವನೆ ಬಗ್ಗೆ ಸಂತಸ ವ್ಯಕ್ತಪ ಡಿಸಿದೆ. ವಿಧಾನಸೌಧ ಆವರಣದಲ್ಲಿ ವಿಶ್ವಗುರು ಬಸವಣ್ಣನವರ ಪುತ್ಥಳಿಯನ್ನು ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಲು ಆದೇಶ ಹೊರಡಿಸಿ ರುವುದು ಎಲ್ಲಾ ಬಸವ ಅಭಿಮಾನಿಗಳಿಗೆ ಹರ್ಷ ತಂದಿದೆ ಎಂದು ಹೇಳಿದೆ.

2020ರಲ್ಲಿ ಮಾಜಿ ಸಚಿವ ಎಸ್. ಕೆ. ಬೆಳ್ಳುಬ್ಬಿ ಮುಖ್ಯಮಂತ್ರಿ ಯಡಿಯೂರಪ್ಪರನ್ನು ಭೇಟಿಯಾಗಿ ವಿಧಾನಸೌಧ ಅಥವಾ ವಿಕಾಸ ಸೌಧದ ಆವರಣದಲ್ಲಿ ಬಸವಣ್ಣನ ಪುತ್ಥಳಿ ನಿರ್ಮಿಸುವಂತೆ ಮನವಿ ಮಾಡಿದ್ದರು.

"ಬಸವಣ್ಣ ಬಸವನಬಾಗೇವಾಡಿ ಇಂಗಳೇಶ್ವರದಲ್ಲಿ ಜನಿಸಿ, ಬಿಜ್ಜಳ ರಾಜನ ಆಸ್ಥಾನದಲ್ಲಿ ಮಂತ್ರಿಯಾಗಿ ವಿಶ್ವಕ್ಕೆ ಸಮಾನತೆಯ ಸಂದೇಶ ಸಾರಿದರು. ಕಲ್ಯಾಣ ಕ್ರಾಂತಿಗೆ ಕಾರಣರಾಗಿ, ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿದರು" ಎಂದು ಬೆಳ್ಳುಬ್ಬಿ ಹೇಳಿದ್ದರು.

"ಈಗಾಗಲೇ ಮುರುಘಾ ಶರಣರು ತಮಗೆ ಮನವಿ ಮಾಡಿಕೊಂಡಿದ್ದರು. ಈ ಬೇಡಿಕೆಯನ್ನು ಮಾಜಿ ಸಚಿವನಾಗಿ ಸರ್ಕಾರಕ್ಕೆ ತಲುಪಿಸಿದ್ದೇನೆ. ಪುತ್ಥಳಿ ನಿರ್ಮಿಸುವ ಭರವಸೆ ನೀಡಬೇಕು" ಎಂದು ಮನವಿ ಮಾಡಿದ್ದರು.

## ಆ.15 ರಂದು 5000 ಮನೆಗಳ ಲೋಕಾರ್ಪಣೆ : ಸಚಿವ ಸೋಮಣ್ಣ

ಬೆಂಗಳೂರು : ಆಗಸ್ಟ್ 15 ರಂದು ರಾಜೀವ್ ಗಾಂಧಿ ವಸತಿ ನಿಗಮದಿಂದ 5000 ಮನೆಗಳನ್ನ ಲೋಕಾರ್ಪಣೆ ಮಾಡುತ್ತಿದ್ದೇವೆ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ವಿಕಾಸಸೌಧದಲ್ಲಿ ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಯಾರಿಗೆ ಅವಶ್ಯಕತೆ ಇದೆಯೋ ಅಂಥವರಿಗೆ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ 46 ಸಾವಿರ ಮನೆ ಪ್ರಾರಂಭ ಮಾಡಿದ್ದೇವೆ ಎಂದು ಅವರು ಹೇಳಿದರು.

ಒಂದು ಲಕ್ಷ ಮನೆಗಳ ಗುರಿ ತಲುಪುವುದಕ್ಕೆ ಪ್ರಯತ್ನಿಸಲಾಗುತ್ತಿದ್ದು,



2022ರ ನವೆಂಬರ್ ತಿಂಗಳ ಒಳಗೆ 80 ಸಾವಿರ ಮನೆಗಳನ್ನು ಬೆಂಗಳೂರು ನಗರ ಜಿಲ್ಲೆ ಅರ್ಹರಿಗೆ ನೀಡುವ ವಿವಿಧ ಕೆಲಸ ಪ್ರಾರಂಭ ಆಗಿದೆ. ಬಿಡಿಎ ವ್ಯಾಪ್ತಿಯನ್ನು ಮೀರಿ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಮನೆಗಳ ನಿರ್ಮಾಣ ಮಾಡುತ್ತಿದ್ದೇವೆ ಎಂದು ಅವರು ತಿಳಿಸಿದರು.

ಕಂದಾಯ ಇಲಾಖೆಯಿಂದ 515 ಎಕರೆ ಜಾಗ ಪಡೆದಿದ್ದೇವೆ.

42361 ಮನೆಗಳ ನಿರ್ಮಾಣ ಹಂತದಲ್ಲಿ ಇದೆ. ಪ್ರಧಾನಿಯವರ ದೂರದೃಷ್ಟಿ ಚಿಂತನೆಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸರ್ಕಾರ ಕೈ ಜೋಡಿಸುವುದು ನಮ್ಮ ಉದ್ದೇಶ. ಒಂದು ಲಕ್ಷ ಮನೆಗಳ ನಿರ್ಮಾಣ ಕಾರ್ಯ ಕೋವಿಡ್ ನಿಂದ ವಿಳಂಬ ಆಗಿತ್ತು ಎಂದ ಅವರು, ಒಂದಿಂಚೂ ಜಾಗವನ್ನು ಹಿಂದಿನ ಸರ್ಕಾರ ತೆಗೆದುಕೊಂಡಿರಲಿಲ್ಲ. ಫಲಾನುಭವಿಗಳ ಆಯ್ಕೆಗೆ ಹಿಂದೆ 87ಸಾವಿರ ರೂ. ಆದಾಯ ನಿಗದಿಪಡಿಸಲಾಗಿತ್ತು.

65 ಸಾವಿರ ಕುಟುಂಬಗಳಿಗೆ ಆಯ್ಕೆ ಪತ್ರ ಈ ಹಿಂದೆ ನೀಡಲಾಗಿತ್ತು ಎಂದು ಅವರು ಹೇಳಿದರು. ಗುತ್ತಿಗೆದಾರರ ಕಾರ್ಯವೈಖರಿ ಬಗ್ಗೆಯೂ ಗಮನ ಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ತಿಳಿಸಿದರು.

## ಹಸಿರು ಇಂಧನ ವ್ಯವಹಾರದಲ್ಲಿ 75000 ಕೋಟಿ ವೆಚ್ಚಕ್ಕೆ ಮುಂದಾದ ರಿಲಯನ್ಸ್!

ಚೆನ್ನೈ: ಜಿಯೋದೊಂದಿಗೆ ಟೆಲಿಕಾಂ ಕ್ಷೇತ್ರದಲ್ಲಿ ಯಶಸ್ವಿಯಾದ ನಂತರ ಇದೀಗ ರಿಲಯನ್ಸ್ ಹೊಸ ಶುದ್ಧ ಮತ್ತು ಹಸಿರು ಇಂಧನದಲ್ಲಿ ವ್ಯವಹಾರವನ್ನು ಆರಂಭಿಸುವುದಾಗಿ ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಹೇಳಿದ್ದಾರೆ.

ಕಂಪನಿಯ ಷೇರುದಾರರ 44ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಮುಕೇಶ್ ಅಂಬಾನಿ, ಒಮ್ಮೆ ತನ್ನ ಬಹುತೇಕ ವ್ಯವಹಾರವನ್ನು ಪೆಟ್ರೋಲಿಯಂ ಕ್ಷೇತ್ರದಿಂದ ಪಡೆದುಕೊಳ್ಳುತ್ತಿದ್ದ ಕಂಪನಿ, ಹಸಿರು ಇಂಧನ ವ್ಯವಹಾರದಲ್ಲಿ ತೊಡಗಲು ಸಿದ್ಧತೆ ನಡೆಸುತ್ತಿರುವುದಾಗಿ ತಿಳಿಸಿದರು.

ಕಳೆದ ವರ್ಷ ಅಮೆರಿಕದ ದೈತ್ಯ ಕಂಪನಿ ಗೂಗಲ್ ಸಹಭಾಗಿತ್ವದೊಂದಿಗೆ ಕೈಗೆಟುಕುವ ದರದಲ್ಲಿ ಸ್ಮಾರ್ಟ್ ಫೋನ್ ಬಿಡುಗಡೆ ಮಾಡುವುದಾಗಿ ರಿಲಯನ್ಸ್ ಘೋಷಿಸಿತ್ತು, ಇದೀಗ, ವಿಶೇಷ ವಿನ್ಯಾಸದ ಆಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಮ್ ನೊಂದಿಗೆ ಕಾರ್ಯನಿರ್ವಹಿಸುವ 5ಜಿ ಜಿಯೋ ಫೋನ್ ನೆಕ್ಸ್ ನ್ನು ಈ ವರ್ಷದ ಗಣೇಶ ಚತುರ್ಥಿಯಂದು ಸೆಪ್ಟೆಂಬರ್ 10 ರಂದು ಬಿಡುಗಡೆ ಮಾಡುವುದಾಗಿ ಅಂಬಾನಿ ಹೇಳಿದ್ದಾರೆ.

ರಿಲಯನ್ಸ್ ಕಂಪನಿ ಮೂರು ವರ್ಷಗಳಲ್ಲಿ ಹಸಿರು ಇಂಧನ ವ್ಯವಹಾರದಲ್ಲಿ 75 ಸಾವಿರ ಕೋಟಿ ರೂ.ವೆಚ್ಚ ಮಾಡಲಿದೆ. ಗುಜರಾತಿನ ಜಾಮ್ ನಗರದಲ್ಲಿ 5 ಸಾವಿರ ಎಕರೆ ಹಬ್ ನಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಈಗಾಗಲೇ ಆರಂಭವಾಗಿದೆ. ಜಾಮ್ ನಗರ ನಮ್ಮ ಹಳೆಯ ವ್ಯವಹಾರದ ತೊಟ್ಟಿಲು ಎಂದು ಅಂಬಾನಿ ಹೇಳಿದರು.

ಧೀರೂಬಾಯಿ ಅಂಬಾನಿ ಹಸಿರು ಇಂಧನ ಗಿಗಾ ಕಾಂಪ್ಲೆಕ್ಸ್ ವಿಶ್ವದಲ್ಲಿಯೇ ನವೀಕರಿಸಬಹುದಾದ ಇಂಧನ ಉತ್ಪಾದನಾ ಸೌಲಭ್ಯಗಳಲ್ಲಿ ಒಂದಾಗಲಿದೆ. ರಿಲಯನ್ಸ್ ತನ್ನ ಹೊಸ ಉದ್ಯಮಕ್ಕಾಗಿ ಮೂರು ಹಂತದ ಯೋಜನೆಯನ್ನು ಬೆಂಬಲಿಸುತ್ತದೆ ಎಂದು ಅವರು ತಿಳಿಸಿದರು.


ತನ್ನ ಕಾರ್ಯತಂತ್ರದ ಭಾಗವಾಗಿ, ಸೌರ ಉತ್ಪಾದನಾ ಘಟಕಗಳು, ಇಂಧನ ಕೋಶ ಉತ್ಪಾದನಾ ಸೌಲಭ್ಯ ಶಕ್ತಿ ಸಂಗ್ರಹಣೆಯನ್ನು ಹೆಚ್ಚಿಸಲು ಬ್ಯಾಟರಿ ಕಾರ್ಖಾನೆ ಮತ್ತು ಹಸಿರು ಹೈಡ್ರೋಜನ್ ಉತ್ಪಾದಿಸಲು ಎಲೆಕ್ಟ್ರೋಲೈಜರ್ ಘಟಕ ಸೇರಿದಂತೆ ನಾಲ್ಕು ಗಿಗಾ ಕಾರ್ಖಾನೆಗಳನ್ನು ನಿರ್ಮಿಸಲು ರಿಲಯನ್ಸ್ ಯೋಜಿಸುತ್ತಿದೆ. ಮುಂದಿನ ಮೂರು ವರ್ಷಗಳಲ್ಲಿ ಈ ಸೌಕರ್ಯಕ್ಕಾಗಿ 60 ಸಾವಿರ ಕೋಟಿಯನ್ನು ರಿಲಯನ್ಸ್ ವೆಚ್ಚ ಮಾಡಲಿದೆ ಎಂದು ಅಂಬಾನಿ ಹೇಳಿದರು.

2030 ರ ವೇಳೆಗೆ 100 ಜಿವ್ಯಾಟ್ ಸೌರಶಕ್ತಿ ಸಾಮರ್ಥ್ಯವನ್ನು ಸ್ಥಾಪಿಸಲು ಕಂಪನಿ ಯೋಜಿಸುತ್ತಿದೆ. 2035ರೊಳಗೆ ನಿವ್ವಳ ಶೂನ್ಯ ಇಂಧನ ಮಾಡಲು ರಿಲಯನ್ಸ್ ಬದ್ಧವಾಗಿರುವುದಾಗಿ ಅಂಬಾನಿ ಕಳೆದ ವರ್ಷ ಹೇಳಿದ್ದರು.

## 'ಶರೀರದ, ಮನಸ್ಸಿನ ಮತ್ತು ಆತ್ಮದ ಸರ್ವಶಕ್ತಿಗಳನ್ನೂ ಭಗವಂತನೊಡನೆ ಸಂಯೋಜಿಸುವುದೇ ಯೋಗ: ಮಹಾತ್ಮಾಗಾಂಧಿ

ಯೋಗ ಶಾಸ್ತ್ರದ ಮೂಲ ಸಾಕ್ಷಾತ್ ಬ್ರಹ್ಮನಿಂದಲೇ ಬಂದಿರುವುದು ಎಂದು ಯೋಗ ಶಾಸ್ತ್ರವು ಹೇಳುತ್ತದೆ. ನಮಗೆ ದೊರಕಿರುವ ಯೋಗ ಶಾಸ್ತ್ರದ ಗ್ರಂಥಗಳಲ್ಲಿ ಪತಂಜಲಿ ಮಹಾಋಷಿಗಳು 195/196 ಸೂತ್ರಗಳನ್ನು ರಚಿಸಿರುತ್ತಾರೆ ಹಾಗೂ ಈ ಯೋಗ ಸೂತ್ರದಲ್ಲಿ ನಾಲ್ಕು ಪಾದಗಳು ಅಥವಾ ಅಧ್ಯಾಯಗಳೂ ಇದೆ. ಹೀಗೆ ಅವರು ಸನಾತನವಾಗಿದ್ದ ಶಾಸ್ತ್ರವನ್ನು ಕ್ರೋಢೀಕರಿಸಿ, ವರ್ಗೀಕರಿಸಿ ಅದಕ್ಕೊಂದು ನಿರ್ದಿಷ್ಟ ರೂಪ ನೀಡಿದ್ದಾರೆ. ಅವಿದ್ಯೆ, ಅಸ್ಮಿತ(ಅಹಂಭಾವನೆ), ರಾಗ(ಆಸಕ್ತಿ), ಪ್ರೀತಿ, ದ್ವೇಷ, ಅಭಿನಿವೇಶ (ಪ್ರಾಪಂಚಿಕ ಜೀವನದಲ್ಲಿ ನಿರಾಸಕ್ತಿ) ಈ ಐದು ಬಗೆಯ ತೊಡಕುಗಳಿಂದ ಯೋಗ ಸಾಧನೆ ಸಾಧ್ಯವಾಗದು. ಆದಕಾರಣ ಮೊದಲು ಯೋಗ ಎಂದರೇನು, ಹೇಗೆ ಮಾಡ ಬೇಕು ಎಂಬುದನ್ನು ಸ್ಪಷ್ಟವಾಗಿ ಅರಿಯಬೇಕು. ಮಹಾತ್ಮಾ ಗಾಂಧಿಯು ಹೇಳುವಂತೆ 'ಶರೀರದ, ಮನಸ್ಸಿನ ಮತ್ತು ಆತ್ಮದ ಸರ್ವಶಕ್ತಿಗಳನ್ನೂ ಭಗವಂತನೊಡನೆ ಸಂಯೋಜಿಸುವುದೇ ಯೋಗ.

ವಿಶ್ವದಾದ್ಯಂತ ಜೂನ್ 21 2015 ರಂದು ಮೊದಲ ಬಾರಿಗೆ 'ವಿಶ್ವ ಯೋಗದಿನ'ವನ್ನು ಆಚರಿಸಲಾಗಿದ್ದು, ಭಾರತ ಸೇರಿದಂತೆ ವಿಶ್ವದ 177 ರಾಷ್ಟಗಳಲ್ಲಿ ಯೋಗ ಅಭ್ಯಾಸವನ್ನು ಮಾಡುವ ಮೂಲಕ ಯೋಗ ದಿನವನ್ನು ಆಚರಿಸಲಾಯಿತು. ಯೋಗಾಸನ, ಧ್ಯಾನ, ಸಾಂಸ್ಕೃತಿಕ ಕಾರ್ಯಕ್ರಮ ಆರೋಗ್ಯದ ಸಲುವಾಗಿ ದೈಹಿಕ ವ್ಯಾಯಾಮ. ಇದು ಯೋಗ ದಿನದ ಪ್ರಮುಖ ಆಶ್ರಯಗಳಾಗಿದ್ದು, ಇದರ ಮೂಲಕ ಯೋಗ ದಿನವನ್ನು ಸಾಕಾರಗೊಳಿಸಲು ಪ್ರಯತ್ನಿಸಲಾಗುತ್ತದೆ. ಹಲವಾರು ವರ್ಷಗಳ ಸಾಂಪ್ರದಾಯಿಕ, ಸುಸಂಸ್ಕೃತ ಸಂಸ್ಕಾರ ಹೊಂದಿರುವ ಭಾರತದಲ್ಲಿ ಎಷ್ಟೋ ಪುರಾಣದ ಕಾಲದಿಂದಲೇ ಯೋಗದ ಅಳವಡಿಕೆ ಇತ್ತೆಂಬುದು ಹಲವಾರು ಸಾಕ್ಷ್ಯಾದಾರಗಳಿಂದ ನಮಗೆ ತಿಳಿದುಬರುತ್ತದೆ.



'ಯೋಗ ಎನ್ನುವುದು ಭಾರತೀಯರಿಗೆ ಪರಂಪರಾಗತವಾಗಿ ಗುರುಹಿರಿಯರಿಂದ ಬಂದಂತಹ ಉಡುಗೊರೆ. 5000 ವರ್ಷಗಳ ನಂಬಿಕೆ ಅಡಗಿದೆ. ಯೋಗವು ಮನಸ್ಸು ಮತ್ತು ದೇಹವನ್ನು ಹಿತಾತ್ಮನ ಜೊತೆಯಲ್ಲಿ ಒಂದುಗೂಡಿಸುವ ಸಾಮರ್ಥ ಹೊಂದಿದೆ. ಪ್ರಕೃತಿ ಮತ್ತು ಮನುಷ್ಯನನ್ನು ಸಂಬಂಧಿಸುವ ವಿಶೇಷ ಗುಣವನ್ನು ಹೊಂದಿರುವ ಈ ಯೋಗವು ಮನುಷ್ಯನು ತನ್ನಲ್ಲಿಯೇ ಇರುವ ಪ್ರಬಲವಾದ ಸಾಮರ್ಥ್ಯವನ್ನು ಪ್ರಚುರಪಡಿಸಲು ನೆರವಾಗುತ್ತದೆ. ಆತನು ತನ್ನ ಶಕ್ತಿಯನ್ನು ಅರಿಯಲು ಇದೊಂದು ಮಾಧ್ಯಮ.ಪ್ರತಿನಿತ್ಯ ಯೋಗದ ಅಳವಡಿಕೆ ಜೀವನದಲ್ಲಿ ಉತ್ತಮ ಬದಲಾವಣೆಗೆ ಪೂರಕ.

### ಯೋಗದ ಮಹತ್ವ:

'ಯಮ–ನಿಯಮ ಅನುಷ್ಠಾನೇ ಪಾಪ ನಿವೃತ್ತಿ', ಯಮ ನಿಯಮಗಳ ಅಭ್ಯಾಸವು ವ್ಯಕ್ತಿಯು ಮನಸ್ಸಿನಲ್ಲಿ ಏಳುವ ಪಾಪಕರ್ಮಗಳನ್ನು ಮಾಡಬೇಕೆಂಬ ಯೋಜನೆಗಳನ್ನು ನಾಶಗೊಳಿಸುತ್ತದೆ ಎಂಬುದಾಗಿ ಯೋಗ ಮಹರ್ಷಿಗಳು ನುಡಿಯುತ್ತಾರೆ.ಹಿಂದಿನ ಕಾಲದಲ್ಲಿ ಗುರುಪದ್ಧತಿಯಲ್ಲಿರಬಹುದು ಅಥವಾ ಗುರುಪರಂಪರಾ ಶಿಷ್ಯ ವೃತ್ತಿಯಲ್ಲಿರಬಹುದು. ಬೆಳಗ್ಗಿನ ಮೂರು ನಾಲ್ಕನೇ ಪ್ರಹರದಲ್ಲಿಯೇ ಶಿಷ್ಯನಿಗೆ ಯೋಗದ ಮೂಲಕ ಸ್ವಸ್ಥ ಆರೋಗ್ಯ, ಪರಿಶುದ್ಧ ಮನಸ್ಸಿನ ಕಲ್ಪನೆಯನ್ನು ಗುರುವು ನೀಡುತ್ತ ಬಂದಿದ್ದನು. ಆ ಮೂಲಕ ಅವರಲ್ಲಿ ಸ್ವಸ್ಥ ಸಮಾಜ ನಿರ್ಮಾಣ ಮಾಡಲು ಬೇಕಾದಂತಹ ಭದ್ರ ಬುನಾದಿಯು ತಿಳಿಯಲ್ಪಡುತ್ತಿತ್ತು. ಮನುಷ್ಯನಲ್ಲಿ ಕೋಪ, ತಾಪ, ಸುಖ ಸಂತೋಷ, ದುಃಖ, ಹಾತೊರೆಯುವಿಕೆ, ಹತಾಷೆ, ತಪ್ಪು, ಒಪ್ಪು, ನಂಬಿಕೆ ಅವಿಶ್ವಾಸ, ದೃಡತೆ, ಒಳ್ಳೆಯವ, ಕೆಟ್ಟವ ಇತ್ಯಾದಿಗಳೆಂಬ ಭಾವನೆಗಳು ಸಾಮಾನ್ಯ. ಜನ ಸಾಮಾನ್ಯರಾದಂತಹ ನಮಗೆ ಇದನ್ನೆಲ್ಲ ಅನುಭವಿಸುವುದು ಜೀವನದ ಹಂತಗಳು. ಕಾರಣ, ಪ್ರತಿಯೊಬ್ಬ ಮಾನವನೂ ಸಹ ತನ್ನ ಜೀವಿತಾವಧಿಯಲ್ಲಿ ಹಲವಾರು ಭಾವನೆಗಳು ಕ್ಷಣಕ್ಷಣದಲ್ಲಿ ಕಾಡುತ್ತಿರುವುದನ್ನು ಅನುಭವಿಸುತ್ತಿರುತ್ತಾನೆ. ಹಾಗಾಗಿ ಕೀಳರಿಮೆ, ಮೇಲರಿಮೆಗಳಂತಹ ಭಾವನೆಗಳು ಅಳಿದು, ಮೂಡನಂಬಿಕೆ, ವರದಕ್ಷಿಣೆಯಂತಹ ಅನಿಷ್ಟ ಪದ್ಧತಿಗಳು ಕೊನೆಯಾಗಿ ಉತ್ತಮ ಮೇಲ್ಮಟ್ಟದ ಶಾರೀರಿಕ, ಮಾನಸಿಕ ಸದೃಢತೆಯ ಭಾವನೆಗಳು ಮಾನವನಲ್ಲಿ ಅವತರಿಸುವುದು ಈ ಭಾವನಾ ಸ್ಥರ ಅಭಿವೃದ್ಧಿಗೊಂಡಾಗಲೇ.

ಇದಕ್ಕೆ ಈ ಯೋಗವು ಪರಿಪೂರ್ಣವಾಗಿ ಸಹಕರಿಸುತ್ತದೆ. ಇದು ಎಲ್ಲ ವಿಧದಲ್ಲಿಯೂ ಪ್ರಮಾಣಿತವಾಗಿರುವುದು ಸತ್ಯವೇ ಸರಿ. ಭಾವನಾಸ್ಥಿರತೆ ಯೋಗದಿಂದ ಸಾಧ್ಯವಾಗಿ ಜನಸಾಮಾನ್ಯರಲ್ಲಿ ಜಾಗೃತಿಯುಂಟಾಗುವುದರಲ್ಲಿ ಯಾವುದೇ ಸಂಶಯವೂ ಇಲ್ಲ. 'ಬುದ್ಧಿಯು ಜ್ಞಾನದಿಂದ ಶುದ್ಧಗೊಳ್ಳುತ್ತದೆ. ಯೋಗಾಭ್ಯಾಸದಿಂದ ಜ್ಞಾನದೀಪ್ತಿಯು ಪರಿಶುದ್ಧತೆಯನ್ನು ಪಡೆಯುತ್ತದೆ.' ಎಂಬಮಾತು ಹಲವಾರು ಪ್ರಶ್ನೆಗಳಿಗೆ ಉತ್ತರವಾಗಿ ಪರಿಣಮಿಸುತ್ತದೆ. ಬೌದ್ಧಿಕ ಸ್ಥರದಲ್ಲಿ ವ್ಯಕ್ತಿತ್ವ ವಿಕಾಸ ಎಂದರೆ ಕೇವಲ ಬುದ್ಧಿಶಕ್ತಿಯನ್ನು ಹರಿತಗೊಳಿಸುವುದು ಎಂಬರ್ಥವಲ್ಲ. ಬದಲಿಗೆ ಹರಿತ ಹೊಂದಿದ ಬುದ್ಧಿಶಕ್ತಿಯು ತಾನೇ ದಾಸನಾಗದೇ ಸ್ವಾಮಿತ್ವ ಹೊಂದುವ ಸಾಮರ್ಥ್ಯ ಪಡೆಯಬೇಕು. ಹಾಗಾಗಿಯೇ ಸ್ವಾಮಿ ವಿವೇಕಾನಂದರು ಏಕಾಗ್ರತೆ ಹಾಗೂ ಆಸಕ್ತಿ ಇವುಗಳನ್ನು ಶಿಕ್ಷಣದ ಪ್ರಮುಖ ಅಂಗಗಳೆಂದು ಗುರುತಿಸಿದ್ದಾರೆ. ಒಂದು ವಿಷಯದ ಬಗೆಗೆ ಆಳವಾಗಿ ಚಿಂತಿಸುತ್ತ ಹೋಗುವುದರ ಜೊತೆಗೆ ಆ ವಿಷಯದಿಂದ ಯಾವುದೇ ಕ್ಷಣದಲ್ಲಿ ಹೊರ ಬರುವ ಸಾಮರ್ಥ್ಯ ಹೊಂದಿರಬೇಕು. ಈ ಸಾಮರ್ಥ್ಯವನ್ನು ಬೆಳವಣಿಗೆಯನ್ನೂ ಕೊಡುವಂತದ್ದು ಯೋಗದ ವೈಶಿಷ್ಟ್ಯ. ಹೀಗೆ ಬೌದ್ಧಿಕ ಸ್ಥರವು ಮೇಲ್ಮಟ್ಟದಲ್ಲಿ ವಿಕಾಸಗೊಳ್ಳಲು ಯೋಗವು ಅವಶ್ಯಕವಾಗಿದೆ.

ಮನುಷ್ಯನ ಜೀವನದ ಪರಮೋಚ್ಚ ಗುರಿಯೇ ಅಧ್ಯಾತ್ಮಿಕವಾಗಿ ಪರಿಪೂರ್ಣವಾಗುವುದು. ಭಾರತೀಯ ಸಾಂಪ್ರದಾಯಿಕ, ಪುಣ್ಯಭೂಮಿಯಲ್ಲಿ ನೆಲೆನಿಂತ ನಾವು ಮುಕ್ತಿಯನ್ನು ಪಡೆಯುವುದರ ಕುರಿತು, ಭಗವಂತನನ್ನು ಸೇರುವುದರ ಕುರಿತು ಆಲೋಚಿಸುತ್ತೇವೆ. ದೈವಿ ಭಾವವನ್ನು ಸದಾ ನಂಬುವ ನಮಗೆ ಮುಕ್ತಿ ಪರಮೋಚ್ಚಗುರಿಯಾಗಿದೆ. ಇಂತಹ ಆಧ್ಯಾತ್ಮಿಕತೆಯನ್ನು ಆಶಿಸುವ ನಮಗೆ ಯೋಗವು ವರಪ್ರದಾಯಕವಾಗಿದೆ. ಹಾಗಾಗಿ 'ಯೋಗವು' ಮನುಜನ ಒಳಮನಸ್ಸಿಗೊಂದು ಆತ್ಮ ಸಂಶೋಧನೆ ನೀಡಿ ಆಧ್ಯಾತ್ಮಿಕ ಸ್ಥರದಲ್ಲಿ ಉತ್ತುಂಗಕ್ಕೇರಲು ಸಹಾಯ ಮಾಡುವುದು. ಯೋಗವು ಮಾನವನ ದೈಹಿಕ, ಮಾನಸಿಕ, ಭಾವನಾತ್ಮಕ, ಬೌದ್ಧಿಕ ಹಾಗೂ ಅಧ್ಯಾತ್ಮಿಕ ಸ್ಥರದಲ್ಲಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಅವಲೋಕಿಸಿದಾಗ ಮಾನವ ಜೀವನದ ಪರಿಪೂರ್ಣ ವಿಕಾಸವುಂಟಾಗಲು ಯೋಗವು ಅನಿವಾರ್ಯ ಎಂಬ ಮನೋಜ್ಞೆಗೆ ಬಂದು ತಲುಪುತ್ತೇವೆ. ಆದ್ದರಿಂದ ಸರ್ವರ ಸುಖಕ್ಕಾಗಿ, ಸರ್ವರ ಏಳ್ಗೆಗಾಗಿ, ಸರ್ವರ ಹಿತಕ್ಕಾಗಿ, ಸರ್ವರ ಆರೋಗ್ಯಕ್ಕಾಗಿ ಸ್ವಯಂ ಪ್ರೇರಿತರಾಗಿ ಯೋಗವನ್ನು ಜೀವನಶೈಲಿಯಲ್ಲಿ ಅಳವಡಿಸಿಕೊಳ್ಳೋಣ.

**1. ಪ್ರಾಣಾಯಾಮ**

ಪ್ರಾಣಾಯಾಮ ಎಂಬುದು ದೇಹದಲ್ಲಿ ಸಕಾರಾತ್ಮಕ ಶಕ್ತಿಯ ಮಟ್ಟವನ್ನು ಹೆಚ್ಚಿಸುತ್ತದೆ ಮತ್ತು ವಿಷವನ್ನು ತೆಗೆದುಹಾಕುವ ಪರಿಪೂರ್ಣ ಉಸಿರಾಟದ ವ್ಯಾಯಾಮವಾಗಿದೆ ಮತ್ತು ಆತಂಕ ಮತ್ತು ಖಿನ್ನತೆಯನ್ನು ಕಡಿಮೆ ಮಾಡುತ್ತದೆ. ಪ್ರಾಣಾಯಾಮ ಮಾಡುವುದರಿಂದಾಗಿ ಉಸಿರಾಟದ ಸಮಸ್ಯೆಗಳಿಗೆ ನಿಯಂತ್ರಣ ನೀಡುತ್ತದೆ.

**2. ಕಪಾಲಭಾತಿ**

ಕಪಾಲಭಾತಿ ಪ್ರಾಣಾಯಾಮ ಎಂಬುದು ಉಸಿರಾಟದ ವ್ಯಾಯಾಮದ ಒಂದು ವಿಧವಾಗಿದ್ದು, ಇದು ಕಾಲಕಾಲಕ್ಕೆ ವಿವಿಧ ಕಾಯಿಲೆಗಳನ್ನು ತೊಡೆದುಹಾಕಲು ಸಹಾಯ ಮಾಡುತ್ತದೆ. ಇದು ಮಾನಸಿಕ ಯೋಗಕ್ಷೇಮ, ಮಧುಮೇಹದ ನಿಯಂತ್ರಣ, ಬೆನ್ನು ನೋವು, ಅಜೀರ್ಣದಂತಹ ಹಲವಾರು ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ.

**3. ಸೂರ್ಯ ನಮಸ್ಕಾರ**

ಸೂರ್ಯ ನಮಸ್ಕಾರವು ಅತ್ಯಂತ ಪ್ರಮುಖ ಯೋಗ ಪದ್ಧತಿಗಳಲ್ಲಿ ಒಂದಾಗಿದೆ. 12 ವಿಭಿನ್ನ ಮಂತ್ರಗಳನ್ನು ಪಠಿಸುವ ಮೂಲಕ 12 ಪ್ರಕಾರದ ಯೋಗಾಸನಗಳನ್ನು ಮಾಡಲಾಗುತ್ತದೆ. ಇದು ದೇಹಕ್ಕೆ ಮತ್ತು ಮಾನಸಿಕವಾಗಿ ಸಾಮರ್ಥ್ಯಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

**4. ತದಾಸನ**

ಇದು ನಿಮ್ಮ ಪಾದಗಳು ಮತ್ತು ಕಾಲುಗಳಿಗೆ ಸಾಕಷ್ಟು ರಕ್ತ ಪರಿಚಲನೆ ನೀಡುವ ಮೂಲಕ ಹೆಚ್ಚು ಶಕ್ತಿ ಒದಗಿಸುತ್ತದೆ ಮತ್ತು ಮಾನಸಿಕ ಸ್ಥಿಮಿತತೆಯನ್ನು ನೀಡುವುದರ ಜೊತೆಗೆ ಖಿನ್ನತೆಯನ್ನು ನಿವಾರಿಸುತ್ತದೆ ಮತ್ತು ನಿಮಗೆ ಚೈತನ್ಯವನ್ನು ತುಂಬುತ್ತದೆ.

**5. ಶವಾಸನ**

ಇದು ನಿಮ್ಮ ಇಡೀ ದೇಹವನ್ನು ಸಡಿಲಗೊಳಿಸುತ್ತದೆ ಮತ್ತು ಒತ್ತಡ, ಆಯಾಸ, ಖಿನ್ನತೆಯನ್ನು ಬಿಡುಗಡೆ ಮಾಡಿ ನಿದ್ರಾಹೀನತೆಯನ್ನು ಗುಣಪಡಿಸುತ್ತದೆ.

ಒಟ್ಟಿನಲ್ಲಿ ಪುರಾತನ ಕಾಲದಿಂದಲೂ ಯೋಗಾಸನವು ಹೆಚ್ಚಿನ ಪ್ರಾಮುಖ್ಯತೆ ಮತ್ತು ಮಹತ್ವ ಪಡೆದುಕೊಂಡಿದೆ. ಸರಿಯಾದ ಮಾರ್ಗದರ್ಶಕರ ಮೂಲಕ ಅದನ್ನು ಅರಿತು ಯೋಗಾಭ್ಯಾಸ ಮಾಡಿದಲ್ಲಿ ಉತ್ತಮ ಫಲಿತಾಂಶ ಪಡೆಯುವುದರಲ್ಲಿ ಯಾವುದೇ ಸಂಶಯವಿಲ್ಲ.



–ಮೊಹಮ್ಮದ್ ಅಜರುದ್ದೀನ್
ಯುವಸಾಹಿತಿ
ಅಕ್ಕಿಹೆಬ್ಬಾಳು ಗ್ರಾಮ
ಕೃಷ್ಣರಾಜಪೇಟೆ ತಾಲ್ಲೂಕು
ಮಂಡ್ಯ ಜಿಲ್ಲೆ–571 605.

ಕ್ರಾಂತಿಯಕಿಡಿ
ಕಾಯಕಯೋಗಿ
KAYAKAYOGI-MORNING DAILY ಕನ್ನಡ ದಿನಪತ್ರಿಕೆ
ಶನಿವಾರ
26 ಜೂನ್ 2021

## ಟ್ವೀಟರ್‌ನಲ್ಲಿ 'ಕೇಂದ್ರ ಸರ್ಕಾರ'ದ ಬದಲು 'ಒಕ್ಕೂಟ ಸರ್ಕಾರ' ಎಂದು ಬರೆದ ಮಾಜಿ ಪ್ರಧಾನಿ



ಬೆಂಗಳೂರು : ಪ್ರಧಾನಿ ನರೇಂದ್ರ ಮೋದಿ ಅವರು ಜಮ್ಮು ಕಾಶ್ಮೀರದ ನಾಯಕರೊಂದಿಗೆ ನಡೆಸುತ್ತಿರುವ ಸರ್ವಪಕ್ಷ ಸಭೆಗಳ ಕುರಿತು ಟ್ವೀಟ್ ಮಾಡಿರುವ ಮಾಜಿ ಪ್ರಧಾನಿ ದೇವೇಗೌಡ ಅವರು, ಕೇಂದ್ರ ಸರ್ಕಾರ ಎಂಬುದರ ಬದಲಿಗೆ 'ಒಕ್ಕೂಟ ಸರ್ಕಾರ' ಎಂದು ಉಲ್ಲೇಖಿಸಿದ್ದಾರೆ.

ಕೇಂದ್ರ ಸರ್ಕಾರ ಎಂಬುದರ ಬದಲಿಗೆ ಒಕ್ಕೂಟ ಸರ್ಕಾರ ಎಂದು ಕರೆಯಲು, ಪತ್ರಗಳಲ್ಲಿ ಉಲ್ಲೇಖಿಸಲು ತಮಿಳುನಾಡು ಸರಕಾರ ನಿರ್ಧಾರ ಕೈಗೊಂಡಿದ್ದು, ಈ ವಿಚಾರದಲ್ಲಿ ಸಾಕಷ್ಟು ಚರ್ಚೆಗಳು ನಡೆಯುತ್ತಿರುವ ಬೆನ್ನಲ್ಲೇ ದೇವೇಗೌಡ ಅವರು 'ಒಕ್ಕೂಟ ಸರ್ಕಾರ' ಎಂಬ ಪದ ಬಳಸಿದ್ದಾರೆ.

'ಒಕ್ಕೂಟ ಸರಕಾರ (Union Government) ಮತ್ತು ಜಮ್ಮು ಕಾಶ್ಮೀರದ ನಾಯಕರ ನಡುವಿನ ಸಂವಾದವು ಉತ್ತಮ ರೀತಿಯಲ್ಲಿ ನಡೆದಿರುವುದು ತಿಳಿದು ನನಗೆ ಸಂತೋಷವಾಯಿತು. ರಾಜ್ಯದ ಸ್ಥಾನಮಾನ ಪುನರ್ ಸ್ಥಾಪನೆ, ವಿಧಾನಸಭಾ ಚುನಾವಣೆ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಸ್ಪಷ್ಟವಾದ ವಿಚಾರ ವಿನಿಮಯ ಸಭೆಯಲ್ಲಿ ನಡೆದಿದೆ. ಜಮ್ಮು ಕಾಶ್ಮೀರದ ಜನ ಶಾಂತಿ, ಪ್ರಗತಿ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಲು ಅರ್ಹರು" ಎಂದು ದೇವೇಗೌಡ ಅವರು ಟ್ವೀಟ್ ಮಾಡಿದ್ದಾರೆ.

# ತುರ್ತುಪರಿಸ್ಥಿತಿಯ ಕರಾಳ ದಿನಗಳನ್ನ ಮರೆಯೋಕಾಗಲ್ಲ

ನವದೆಹಲಿ : ಇಂದಿರಾ ಗಾಂಧಿ ಸರ್ಕಾರವು 1975 ರ ಜೂನ್ 25 ಕ್ಕೆ ಭಾರತದಲ್ಲಿ 21 ತಿಂಗಳ ಅವಧಿಯ ತುರ್ತು ಪರಿಸ್ಥಿತಿ ವಿಧಿಸಿದ ಕುರಿತಾಗಿ ಇಂದು ಟ್ವೀಟ್ ಮಾಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, 'ಇದು ಕಾಂಗ್ರೆಸ್ ನಮ್ಮ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹೊಸಕಿಹಾಕಿದ ರೀತಿ' ಎಂದಿದ್ದಾರೆ.

'ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು ಯಾವಾಗಲೂ ಮರೆಯಲಾಗುವುದಿಲ್ಲ. 1975 ರಿಂದ 1977 ರವರೆಗಿನ ಅವಧಿಯು ಹಲವು ಸಂಸ್ಥೆಗಳ ವ್ಯವಸ್ಥಿತ ವಿನಾಶವನ್ನು ಕಂಡಿತು. ಭಾರತದ ಪ್ರಜಾಪ್ರಭುತ್ವದ ಚೇತನವನ್ನು ಬಲಪಡಿಸಲು ಮತ್ತು ನಮ್ಮ ಸಂವಿಧಾನದಲ್ಲಿ ಹೇಳಿರುವ ಮೌಲ್ಯಗಳಿಗೆ ತಕ್ಕಂತೆ ಬದುಕಲು ಸಾಧ್ಯವಾದದ್ದನ್ನೆಲ್ಲ ಮಾಡುತ್ತೇವೆ ಎಂದು ಪ್ರತಿಜ್ಞೆ ಮಾಡೋಣ ಬನ್ನಿ' ಎಂದು ಮೋದಿ



ತಮ್ಮ ವೈಯಕ್ತಿಕ ಟ್ವಿಟರ್ ಖಾತೆಯಲ್ಲಿ ಬರೆದಿದ್ದಾರೆ.

ಜೊತೆಗೆ, 'ಇದು ಕಾಂಗ್ರೆಸ್ ನಮ್ಮ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹೊಸಕಿಹಾಕಿದ ರೀತಿ. ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಭಾರತೀಯ ಪ್ರಜಾಪ್ರಭುತ್ವವನ್ನು ರಕ್ಷಿಸಿದ ಎಲ್ಲಾ ಮಹಾತ್ಮರನ್ನು ನಾವು ಸ್ಮರಿಸುತ್ತೇವೆ' ಎಂದಿರುವ ಮೋದಿ, ಆ ಅವಧಿಯಲ್ಲಿ ಸರ್ಕಾರಿ ನಿಷೇಧಕ್ಕೊಳಗಾಗಿದ್ದ ವಿಚಾರಗಳ ಬಗ್ಗೆ ಬಿಜೆಪಿ ನಿರ್ಮಿಸಿರುವ ಇನ್‌ಸ್ಟಾಗ್ರಾಂ ಪೋಸ್ಟ್‌ನ ಲಿಂಕ್ ಅನ್ನು ಶೇರ್ ಮಾಡಿದ್ದಾರೆ.

ಮಹಾತ್ಮ ಗಾಂಧಿ ಮತ್ತು ರವೀಂದ್ರನಾಥ ಠಾಗೂರರ ಸ್ವತಂತ್ರ ವಿಚಾರಗಳು, ಕಿಶೋರ್ ಕುಮಾರ್‌ರ ಗೀತೆಗಳು, ಚಂದ್ರಶೇಖರ ಆಜಾದ್ ಮತ್ತು ಭಗತ್ ಸಿಂಗ್‌ರ ಮೇಲಿನ ಚಲನಚಿತ್ರಗಳು ಮತ್ತು ಪ್ರತಿಭಟನೆಗಳು ತುರ್ತುಪರಿಸ್ಥಿತಿಯಲ್ಲಿ ನಿಷೇಧಗೊಂಡಿದ್ದವು ಎಂದು ಬಿಜೆಪಿ ಪಟ್ಟಿ ಮಾಡಿದೆ. ಭಾರತಕ್ಕೆ ಇಂಥ ಸ್ಥಿತಿಯನ್ನು ಹೇರಿದವರಿಗೆ(ಕಾಂಗ್ರೆಸ್) ಮತ್ತೆ ಹಾಗೆ ಮಾಡುವ ಅಧಿಕಾರ ಸಿಗದಂತೆ ಮಾಡೋಣವೆಂದು ಜೊತೆಯಾಗಿ ಪ್ರತಿಜ್ಞೆ ಮಾಡೋಣ ಎಂದು ಕರೆ ನೀಡಿದೆ.

# ತುರ್ತು ಪರಿಸ್ಥಿತಿಯಲ್ಲಿ 'ಕೈ' ದೇಶದ ಜನರಲ್ಲಿ ಕ್ಷಮೆ ಕೇಳಲಿ

ಬೆಂಗಳೂರು : ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ ಕರಾಳ ಶಾಸನ ಬರೆದಿರುವ ಕಾಂಗ್ರೆಸ್ ಪಕ್ಷವು ದೇಶದ ಜನತೆಯ ಕ್ಷಮೆಯಾಚಿಸುವ ಮೂಲಕ ತನ್ನ ತಪ್ಪು ಒಪ್ಪಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಒತ್ತಾಯಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 46 ವರ್ಷಗಳ ಹಿಂದೆ ಇದೇ ದಿನ ಅಂದಿನ ಪ್ರಧಾನಿ ಇಂದಿರಾಗಾಂಧಿ ಯಾವ ಕಾರಣ ಇಲ್ಲದೇ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದರು. ಕೇವಲ ತನ್ನ ಖುರ್ಚಿ ಉಳಿವಿಗಾಗಿ ಇಂತಹ ತೀರ್ಮಾನ ಮಾಡಿ ದ್ದರು. ದೇಶದ ಅನೇಕ ನಾಯಕರು ಜೈಲುವಾಸ ಅನುಭವಿ ಸಬೇಕಾಯಿತು. ವಾಕ್ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ ಕಸಿದುಕೊಳ್ಳಲಾಯಿತು. ಇದನ್ನು ಅಂದು ಹಲವು ಪತ್ರಿಕೆಗಳು ಖಂಡಿಸಿ ಪ್ರತಿಭಟಿಸಿದ್ದವು ಎಂದರು.

ತುರ್ತು ಪರಿಸ್ಥಿತಿಯಲ್ಲಿ ಜೈಲು ಸೇರಿದ್ದ ನಟಿ ಸ್ನೇಹಲತಾ ಜೈಲಿನಲ್ಲಿ ಸಾವನ್ನ ಪ್ಪಿದ್ದರು. ನಾನು ಸೇರಿದಂತೆ ಅನೇಕ ಕಾರ್ಯಕರ್ತರು ಜೈಲುವಾಸ ಅನುಭವಿಸಬೇಕಾ ಯಿತು. ವಾಜಪೇಯಿ, ಅಡ್ವಾಣಿ, ಜಾರ್ಜ್ ಫರ್ನಾಂಡೀಸ್, ದೇವೇಗೌಡ ಸೇರಿದಂತೆ ಎಲ್ಲರನ್ನೂ ಬಂಧಿಸಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿಟ್ಟಿದ್ದರು.

ನಮ್ಮನ್ನು ಮುಗಿಸುವ ಪ್ರಯತ್ನವೂ ನಡೆದಿತ್ತು. ಆನಂತರ ನಡೆದ ಲೋಕಸಭೆ ಚುನಾವಣೆಯಲ್ಲಿ ಜನ ಅವರನ್ನು ತಿರಸ್ಕರಿಸಿದರು.

ಈ ದಿನ ಬಿಜೆಪಿಯಿಂದ ಅಂದು ಬಂಧಿತರಾದವರ ಮನೆಗೆ ಹೋಗಿ ಗೌರವಿಸುವ ಕೆಲಸ ಮಾಡಲಾಗುತ್ತಿದೆ. ಕರಾಳ ಶಾಸನ ಜನಜೀವನದ ಮೇಲೆ ಬೀರಿದ ದುಷ್ಪರಿಣಾಮ 46 ವರ್ಷಗಳಾದ ಮೇಲೆಯೂ ಕಾಣುತ್ತಿದೆ. ಇದಕ್ಕಾಗಿ ಕಾಂಗ್ರೆಸ್ ದೇಶದ ಜನರಲ್ಲಿ ಕ್ಷಮೆ ಕೇಳಬೇಕು ಆ ಮೂಲಕ ಅವರು ಮಾಡಿದ ಅಕ್ಷಮ್ಯ ಅಪರಾಧವನ್ನು ಒಪ್ಪಿಕೊಳ್ಳಬೇಕು. ಇಂದು ಮನೆ ಮನೆಗೆ ಹೋಗಿ ಗುರುತಿಸಿ ಸನ್ಮಾನ ಮಾಡುತ್ತಿರುವ ನಮ್ಮ ಕಾರ್ಯಕರ್ತರಿಗೆ ಧನ್ಯವಾದ ತಿಳಿಸುತ್ತೇನೆ. ಜೈಲಿನಲ್ಲಿದ್ದಾಗ ಅಲ್ಲೇ ನಮ್ಮನ್ನು ಮುಗಿಸೋಕೆ ಪ್ರಯತ್ನ ಮಾಡಿದ್ದನ್ನು ಜೀವನ ಪೂರ್ತಿ ನೆನಪಿಟ್ಟುಕೊಳ್ಳಬೇಕು.

ಜಯಪ್ರಕಾಶ್ ನಾರಾಯಣ್ ಪುಣ್ಯಾತ್ಮನ ಹೋರಾಟದಿಂದ ತುರ್ತು ಪರಿಸ್ಥಿತಿ ಅಂತ್ಯ ಆಯಿತು ಎಂದು ಹಳೆಯ ನೆನಪುಗಳನ್ನು ಸಿಎಂ ಮೆಲುಕು ಹಾಕಿದರು.

## ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು; 365ದಿನ ಜೋಗ ಜಲಪಾತಕ್ಕೆ ನೀರು ಬಿಡಲು ಯೋಜನೆ



ಬೆಂಗಳೂರು : ಜಗತ್ ವಿಖ್ಯಾತ ಜೋ ಗದ ಸಿರಿಯ ವೈಭವವನ್ನು ಇನ್ಮುಂದೆ ವರ್ಷದ ಎಲ್ಲಾ ದಿನಗಳಲ್ಲೂ ಕಾಣಸಿಗುವಂತೆ ಯೋ ಜನೆ ರೂಪಿಸಲಾಗಿದೆ. ಜೋಗ ಜಲಪಾತಕ್ಕೆ ಡ್ಯಾಂ ನಿಂದ ನೀರು ಬಿಡುವ ವ್ಯವಸ್ಥೆ ಮಾಡ ಲಾಗುವುದು. ಆ ಮೂಲಕ ಮುಂದೆ ವರ್ಷ ಪೂರ್ತಿ ಧುಮ್ಮಿಕ್ಕುವ ಜೋಗ ಜಲಪಾತ ನೋಡ ಬಹುದು ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಹೇಳಿದ್ದಾರೆ.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಪ್ರವಾಸಿ ತಾಣಗಳನ್ನು ನೋಡಲು ಕೇರಳ, ಮಹಾರಾಷ್ಟ್ರದಿಂದ ಎಲ್ಲಾ ಕಡೆ ಜನರ ಬರುತ್ತಾರೆ. ಪ್ರವಾಸೋದ್ಯಮದಿಂದ ರಾಜ್ಯಕ್ಕೆ 18 ರಷ್ಟು ಜಿಡಿಪಿ ಬರುತ್ತಿದೆ. ಜಿಡಿಪಿಯಲ್ಲಿ ನಾವು ದೇಶದಲ್ಲೇ ಮೂರನೇ ಸ್ಥಾನದಲ್ಲಿದ್ದೇವೆ. ಇನ್ಮುಂದೆ ಇನ್ನಷ್ಟು ಪ್ರವಾಸೋದ್ಯಮ ಇಲಾಖೆ ಬಲಿಷ್ಠಗೊಳಿಸುತ್ತೇವೆ ಎಂದರು.

ಪ್ರವಾಸಿ ಗೈಡ್‌ಗಳಿಗೆ ಪರಿಹಾರ ಲಾಕ್ ಡೌನ್‌ನಿಂದಾಗಿ ಪ್ರವಾಸೋದ್ಯಮಕ್ಕೆ ಭಾರೀ ಪೆಟ್ಟು ಬಿದ್ದಿದೆ. ಈಗ ಪ್ರವಾಸೋದ್ಯಮ ಕ್ಷೇತ್ರಕ್ಕೆ ಹಲವು ರಿಯಾಯ್ತಿ ನೀಡಲಾಗಿದೆ. ರೆಸಾರ್ಟ್, ಮನರಂಜನೆ ಪಾರ್ಕ್ ಗೆ 50ರಷ್ಟು ತೆರಿಗೆ ವಿನಾಯಿತಿ ನೀಡಲಾಗಿದೆ. ಪ್ರವಾಸಿಗರನ್ನೇ ನೆಚ್ಚಿಕೊಂಡಿದ್ದ ಪ್ರವಾಸಿ ಗೈಡ್‌ಗಳಿಗೆ ಸಾಕಷ್ಟು ಆರ್ಥಿಕ ನಷ್ಟವಾಗಿದ್ದು, ಅದಕ್ಕಾಗಿ ಪರಿಹಾರದ ಹಣ ನೀಡುತ್ತೇವೆ. ಅವರ ಬ್ಯಾಂಕ್ ಅಕೌಂಟ್ ಗೆ ಬಿಡುಗಡೆ ಮಾಡುತ್ತೇವೆ. ಮೋಟಾರು ವಾಹನ ತೆರಿಗೆಯಲ್ಲೂ ವಿನಾಯ್ತಿ ನೀಡಲಾಗಿದೆ ಎಂದರು.

ಹೆಲಿಟೂರಿಸಂ ಮಾಡುವ ಉದ್ದೇಶವಿದೆ. ರಾಜ್ಯದಲ್ಲಿ ಲಾಕ್‌ಡೌನ್‌ನಿಂದ ಪ್ರವಾಸೋದ್ಯಮದ ಕೆಲದ ಚಟುವಟಿಕೆ ಸ್ಥಗಿತಗೊಂಡಿತ್ತು. ಲಾಕ್‌ಡೌನ್ ಬಳಿಕ ಪ್ರವಾಸೋದ್ಯಮದ ಬಾಗಿಲು ಈಗ ತೆರೆಯುತ್ತಿದ್ದೇವೆ. ಮುಂದಿನ ವಾರದಿಂದ ಬಹುತೇಕ ಎಲ್ಲವೂ ಪ್ರಾರಂಭ ಮಾಡುತ್ತೇವೆ ಜಂಗಲ್ ಲಾಡ್ಜ್ ಹೊಟೇಲ್ ಗಳನ್ನ ಪ್ರಾರಂಭಿಸುತ್ತೇವೆ. ಇರುವ ರೆಸಾರ್ಟ್, ಹೊಟೇಲ್ ಗಳನ್ನ ಬಳಸಿಕೊಳ್ಳುತ್ತೇವೆ. ಹೆಲಿ ಟೂರಿಸಂ ಮಾಡುವ ಉದ್ದೇಶವೂ ಇದೆ. ಇಲಾಖೆಗೆ ಕ್ರೀಯಾಶೀಲತೆಯನ್ನ ತಂದಿದ್ದೇವೆ. ಪ್ರವಾಸೋದ್ಯಮಕ್ಕೆ ಹೆಚ್ಚಿನ ಅನುದಾನ ಇಟ್ಟಿಲ್ಲ. ವಾರ್ಷಿಕ 1000 ಕೋಟಿ ಅನುದಾನ ನಮಗೆ ಬೇಕಿದೆ. ಈಗ ಆರ್ಥಿಕ ಇಲಾಖೆ ಕೊಡುವುದಾಗಿ ಹೇಳಿದೆ ಎಂದರು.

**ಪ್ರವಾಸೋದ್ಯಮಕ್ಕೆ ಜಲಾಶಯದ ನೀರು**

ಜಲಾಶಯಗಳ ನೀರನ್ನ ವಿದ್ಯುತ್,ವ್ಯವಸಾಯಕ್ಕೆ ಉಪಯೋಗವಾಗುತ್ತಿತ್ತು. ಇನ್ಮುಂದೆ ಪಿಪಿಎ ಮಾದರಿಯಲ್ಲಿ ಜಲಕ್ರೀಡೆಗೆ ಅವಕಾಶ ಮಾಡಿಕೊಂಡು, ಪ್ರವಾಸೋದ್ಯಮಕ್ಕೂ ಬಳಸಿಕೊಳ್ತೇವೆ. ಮೊದಲು ನೀರಿನ ಹಕ್ಕನ್ನ ಕೊಡ್ತಿರಲಿಲ್ಲ. ಆದರೆ, ಈಗ ಅಲ್ಲಿಯೂ ಪ್ರವಾಸೋದ್ಯಮಕ್ಕೆ ಬಳಸಿಕೊಳ್ಳುತ್ತೇವೆ ಎಂದರು.

ಇದೇ ವೇಳೆ ನಾಯಕತ್ವ ಬದಲಾವಣೆ ವಿಚಾರ ಕುರಿತು ಮಾತನಾಡಿದ ಅವರು, ನಮ್ಮನೋವು ನಾಲ್ಕುಗೋಡೆಗಳ ಮಧ್ಯೆ ಹೇಳಿದ್ದೇವೆ. ನಾವು ಎಕ್ಸಾಮ್ ಬರೆದಿದ್ದೇವೆ. ರಿಸಲ್ಟ್ ಗೋಸ್ಕರ ಕಾಯುತ್ತಿದ್ದೇವೆ. ಅರುಣ್ ಸಿಂಗ್ ಬಂದಾಗ ಎಕ್ಸಾಮ್ ಬರೆದಿದ್ದೆವು. ಆ ರಿಸಲ್ಟ್ ಬರಬೇಕಲ್ಲ, ಬಂದಾಗ ನೋಡೋಣ. ಮುಖ್ಯಮಂತ್ರಿ ಬಗ್ಗೆ ನನಗೆ ಗೌರವವಿದೆ. ಅವರು ಇನ್ನೂ ಎರಡು ವರ್ಷ ಇರಲಿ, ತಪ್ಪೇನು ಇಲ್ಲ. ನಮ್ಮ ನೋವು,ಸಮಸ್ಯೆ ಮೊದಲೇ ಹೇಳಿದ್ದೆ. ಹಳೆ ಮೈಸೂರು ಭಾಗದಲ್ಲಿ ಪಕ್ಷ ಸಂಘಟಿಸಬೇಕು. ಇದನ್ನ ನಾವು ಎಲ್ಲಿ ಹೇಳಬೇಕು ಹೇಳಿದ್ದೇವೆ. ಅವರು ಇದರ ಬಗ್ಗೆ ನಿರ್ಧಾರ ಮಾಡುತ್ತಾರೆ. ನಮ್ಮ ಹಿರಿಯರು ತೀರ್ಮಾನ ಮಾಡ್ತೇವೆ ಅಂದಿದ್ದಾರೆ. ಅವರ ನಿರ್ಧಾರದ ಕಡೆ ನೋಡ್ತಿದ್ದೇವೆ

ಇದೇ ವೇಳೆ ಜಿಲ್ಲಾ ಉಸ್ತುವಾರಿ ಕುರಿತು ಪ್ರತಿಕ್ರಿ ಯಿಸಿದ ಅವರು, ನನಗೆ ಯಾವುದೇ ಉಸ್ತುವಾರಿ ಕೊಟ್ಟಿಲ್ಲ. ಕೋಲಾರಕ್ಕೆ ಅರವಿಂದ ಲಿಂಬಾವಳಿ ಕೊಟ್ಟಿದ್ದಾರೆ ಎಂದು ಸ್ಪಷ್ಟಪಡಿಸಿದರು.

ರಮೇಶ್ ಜಾರಕಿಹೊಳಿ ರಾಜೀನಾಮೆ ವಿಚಾರ ಕುರಿತು ಮಾತನಾಡಿದ ಅವರು, ಅವರ ನಿರ್ಣಯದ ಬಗ್ಗೆ ನನಗೆ ಮಾಹಿತಿಯಿಲ್ಲ. ವೈಯಕ್ತಿವಾಗಿ ಅವರ ಜೊತೆಯಲ್ಲೇ ಇದ್ದೇನೆ. 20 ವರ್ಷಗಳಿಂದಲೂ ಅವರ ಜೊತೆಯಲ್ಲಿದ್ದೇವೆ. ಅವರು ರಾಜೀನಾಮೆಯಂತ ಪ್ರಯತ್ನಕ್ಕೆ ಹೋಗಿಲ್ಲ ಎಂದರು.

## ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡೋದಿಲ್ಲ ರಮೇಶ್ ಜಾರಕಿಹೊಳಿ ಹೇಳಿಕೆ

ಮೈಸೂರು: ನಾನು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ನಿರ್ಧರಿಸಿದ್ದು ಸತ್ಯ. ಆದ್ರೆ ಈಗ ಆ ನಿರ್ಧಾರದಿಂದ ಹಿಂದೆ ಸರಿದಿದ್ದೇನೆ ಎಂದು ಶಾಸಕ ಹಾಗೂ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಹೇಳಿದ್ದಾರೆ.



ಸುತ್ತೂರು ದೇಶೀ ಕೇಂದ್ರಕ್ಕೆ ಭೇಟಿ ನೀಡಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇನ್ನು 8 ರಿಂದ 10 ದಿನ ನನ್ನನ್ನು ಬಿಟ್ಟುಬಿಡಿ ಎಂದು ಮಾಧ್ಯಮಗಳಲ್ಲಿ ಮನವಿ ಮಾಡಿಕೊಂಡ ಜಾರಕಿಹೊಳಿ, ನಾನು ಅಲ್ಲಿಯವರೆಗೂ ಏನು ಮಾತಾಡಲ್ಲ ಎಂದರು. ನಾನು ಮನನೊಂದು ರಾಜೀನಾಮೆ ನಿರ್ಧಾರ ಮಾಡಿದ್ದು ನಿಜ ಎಂದು ಜಾರಕಿಹೊಳಿ ಒತ್ತಿ ಹೇಳಿದರು. ಇನ್ನೊಬ್ಬರನ್ನ ಸಚಿವನನ್ನಾಗಿ ಮಾಡುವ ಶಕ್ತಿ ಇರುವ ನಾನು ಮತ್ತೆ ಸಚಿವನಾಗೋಕೆ ಲಾಬಿ ಮಾಡುತ್ತೇನಾ ಎಂದು ಪ್ರಶ್ನಿಸಿದ ಜಾರಕಿಹೊಳಿ, ಇರುವ ಶಾಸಕ ಸ್ಥಾನವನ್ನೇ ಬಿಡುವ ಚಿಂತನೆ ಮಾಡಿದ್ದವನು ನಾನು. ಹೀಗಿರುವಾಗ ಸಚಿವ ಸ್ಥಾನದ ಲಾಬಿ ಮಾಡುವ ಪ್ರಶ್ನೆಯೇ ಇಲ್ಲ ಎಂದರು.

## ಶ್ಯಾಂ ಪ್ರಸಾದ್ ಮುಖರ್ಜಿಯವರ ಜನ್ಮದಿನದ ಪ್ರಯುಕ್ತ ವಿವಿಧ ಕಾರ್ಯಕ್ರಮ

ಮೈಸೂರು : ಭಾರತೀಯ ಜನಸಂಘದ ಸ್ಥಾಪಕಾಧ್ಯಕ್ಷ ಶ್ಯಾಂ ಪ್ರಸಾದ್ ಮುಖರ್ಜಿಯವರ ಪುಣ್ಯತಿಥಿ ಮತ್ತು ಜನ್ಮದಿನದ ಪ್ರಯುಕ್ತ ನಗರದಲ್ಲಿ ಇಂದಿನಿಂದ ವಿವಿಧ ಕಾರ್ಯಕ್ರಮಗಳನ್ನು ಬಿಜೆಪಿ ಹಮ್ಮಿಕೊಂಡಿದೆ ಎಂದು ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ತಿಳಿಸಿದರು.

ಹೆಲ್ದಿ ಇಂಡಿಯಾ ಅಡಿಯಲ್ಲಿ ಪ್ಲಾಸ್ಟಿಕ್ ಮುಕ್ತ ಅಭಿಯಾನವನ್ನು 23ರಿಂದ ಜು.6ವರೆಗೆ ಹಮ್ಮಿಕೊಳ್ಳಲಾಗುವುದು

ಇಂದು ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಅವರು ಬಿಜೆಪಿ ರಾಷ್ಟ್ರೀಯ ಘಟಕ ಇವತ್ತಿಂದ ಜುಲೈವರೆಗೆ ಕಾರ್ಯಕ್ರಮ ಮಾಡಲು ಒಂದಷ್ಟು ಯೋಜನೆಯನ್ನು ಕಳುಹಿಸಿದೆ ಎಂದು ತಿಳಿಸಿದರು. ಜೂ.21 ಅಂತರ ರಾಷ್ಟ್ರೀಯ ಯೋಗ ದಿನವಾಗಿತ್ತು. ಅಂದು ಯೋಗ ಕಾರ್ಯಕ್ರಮದ ಪ್ರಯುಕ್ತ ಮನೆಯಲ್ಲಿಯೇ ಯೋಗ ಮಾಡಿ, ಫೋಟೋ ಕಳುಹಿಸಿ ಎಂದು ಹೇಳಲಾಗಿತ್ತು. ಲಿಂಕ್ ಕಳುಹಿಸಿಕೊಟ್ಟು ಅದಕ್ಕೆ ಫೋಟೋ ಹಾಕಲು ಹೇಳಲಾಗಿತ್ತು. 387ಬೂತ್ ಗಳಲ್ಲಿಯೇ ಕಾರ್ಯಕ್ರಮಗಳನ್ನು ಕಾರ್ಯಕರ್ತರು ಮಾಡಿದ್ದಾರೆ. 1088 ಕಾರ್ಯಕರ್ತರು ಈ ಯೋಗದಿನದಂದು ಭಾಗವಹಿಸಿದ ಫೋಟೋ ಹಾಕಿರುವುದು ವಿಶೇಷ. ನಾವು ಒಟ್ಟಾಗಿ ಮಾಡಿ ಅಂದರೂ ಈ ಸಂಖ್ಯೆಯಲ್ಲಿ ಆಗುತ್ತಿರಲಿಲ್ಲವೇನೋ ಎಂದರು.

ನಗರ ಪಾಲಿಕೆ ಸದಸ್ಯರು ಐದಾರು ಮಂದಿ ಯೋಗಾಭ್ಯಾಸ ಮಾಡಿದ್ದು, ಕಾರ್ಯಕರ್ತರು ಭಾಗವಹಿಸಿರುವುದು ವಿಶೇಷವಾಗಿದೆ ಎಂದರು. ಜೂ.23ರಿಂದ ಜು.6ರವರೆಗೆ ಅನೇಕ ಕಾರ್ಯಕ್ರಮಗಳನ್ನು ಬಿಜೆಪಿ ರಾಷ್ಟ್ರೀಯ ಘಟಕ ನೀಡಿದೆ. ಭಾರತೀಯ ಜನಸಂಘದ ಸ್ಥಾಪಕಾಧ್ಯಕ್ಷ ಶ್ಯಾಂ ಪ್ರಸಾದ್ ಮುಖರ್ಜಿಯವರ ಪುಣ್ಯತಿಥಿ ಮತ್ತು ಜು.6ಹುಟ್ಟಿದ ದಿನ. ಪ್ರತಿಯೊಂದು ಬೂತ್ ಲ್ಲಿ 25ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ವಾರ್ಡ್ ಗಳಲ್ಲಿ ಬರುವ ಎಲ್ಲ ಬೂತ್ ಗಳಲ್ಲಿ 25 ಸಸಿ ನೆಡಬೇಕೆನ್ನುವ ಮತ್ತು ಅದರ ಪಾಲನೆ–ಪೋಷಣೆ ಮಾಡಬೇಕೆನ್ನುವ ಮನವಿ ಮಾಡಲಾಗಿದೆ. ರೈತ ಮೋರ್ಚಾದ ಅಧ್ಯಕ್ಷರ ನೇತೃತ್ವದಲ್ಲಿ ಉಸ್ತುವಾರಿಗಳನ್ನು ಅವರಿಗೇ ನೀಡಿದ್ದೇವೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿಂದು ಬೆಳಿಗ್ಗೆ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ಲಭಿಸಿದೆ. ಸಾಯಂಕಾಲ ಶಾಸಕ ರಾಮದಾಸ್ ಅವರು ಎರಡು ಮೂರು ಕಡೆ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನಿಡಲಿದ್ದಾರೆಂದು ತಿಳಿಸಿದರು.

ಜು.6ರವರೆಗೆ ಎಷ್ಟು ಬೂತ್ ಗಳಲ್ಲಿ ಮಾಡಲು ಸಾಧ್ಯವಿದೆ ಎಂಬುದನ್ನು ತಿಳಿಸಿಕೊಟ್ಟಿದ್ದೇವೆ. ಇನ್ನು ಜೂ.25 ತುರ್ತು ಪರಿಸ್ಥಿತಿ ಹೇರಿದ ದಿವಸ. ಯಾಕಾಗಿ ತುರ್ತು ಪರಿಸ್ಥಿತಿ ತಂದರು, ಆ ಸಂದರ್ಭದಲ್ಲಿ ಏನೆಲ್ಲ ಕಷ್ಟಗಳನ್ನು ಎದುರಿಸಬೇಕಾಯಿತು ಎಂಬುದನ್ನು ಕಾರ್ಯಕರ್ತರಿಗೆ ತಿಳಿಸುವ ಸಣ್ಣ ಪ್ರಯತ್ನ ಮಾಡಲಾಗುವುದು. ಹಿರಿಯರಾದ ಎನ್.ಆರ್.ಚಂದ್ರಶೇಖರ್, ಮಧುಸೂದನ್, ತೋಂಟದಾರ್ಯ ಇವರೆಲ್ಲ ಜೈಲಲ್ಲಿ ಇದ್ದಂತಹವರು. ತುರ್ತು ಪರಿಸ್ಥಿತಿಯಲ್ಲಿನ ಸಮಯದಲ್ಲಿ ಜೈಲಲ್ಲಿ ಇದ್ದ ನಂತರ ಅನುಭವಿಸಿದ ತೊಂದರೆಗಳನ್ನು ತಿಳಿಸಿಕೊಡಲಾಗುವುದೆಂದು ತಿಳಿಸಿದರು.

ಕೆರೆಗಳು, ಬಾವಿಗಳು ಇತರ ಜಲಮೂಲಗಳ ಬಗ್ಗೆ ವಿಶೇಷ ಗಮನ ಹರಿಸಿ ಕ್ಲೀನ್ ಇಂಡಿಯಾ, ಹೆಲ್ದಿ ಇಂಡಿಯಾ ಅಡಿಯಲ್ಲಿ ಪ್ಲಾಸ್ಟಿಕ್ ಮುಕ್ತ ಅಭಿಯಾನವನ್ನು ಜೂ. 23ರಿಂದ ಜು.6ವರೆಗೆ ಹಮ್ಮಿಕೊಳ್ಳಲಾಗುವುದು ಎಂದರು.

## ಭಕ್ಷಿಗಾರ್ಡನ್ ದಾದಗಿರಿ ಹಾಗೂ ಕಾರ್ಪೋರೇಟರ್‌ಗಳ ಸಾವು!

ಬೆಂಗಳೂರು : ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ಮಾಜಿ ಸದಸ್ಯೆ ರೇಖಾ ಕದಿರೇಶ್ ತನ್ನ ಕಚೇರಿ ಮುಂದೆ ಹತ್ಯೆಯಾಗಿದ್ದಾರೆ. ಅರೋಪಿಗಳನ್ನು ಹುಡುಕಲಿಕ್ಕೆ ನಾನಾ ಆಯಾಮದಲ್ಲಿ ಎಂಟು ಪೊಲೀಸ್ ತಂಡಗಳು ಕಾರ್ಯ ನಿರತವಾಗಿದೆ. ಲಾಕ್ ಡೌನ್ ಸಡಿಲಗೊಳ್ಳುವುದನ್ನೇ ಕಾಯುತ್ತಿದ್ದ ಹಂತಕರು ಹತ್ಯೆಗೆ ಮುಹೂರ್ತ ಫಿಕ್ಸ್ ಮಾಡಿದ್ದರೇ ಎಂಬ ವಿಷಯ ಭಾರೀ ಚರ್ಚೆಗೆ ನಾಂದಿ ಹಾಡಿದೆ.

**ಆಕೆ ಮೇಲೆ ಬೆಳಗಿನಿಂದಲೂ ನಿಗಾ:** ಕೊರೊನಾ ಸೋಂಕು ಹಿನ್ನೆಲೆಯಲ್ಲಿ ಹಸಿದವರಿಗೆ ಅನ್ನ ಕೊಡುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ರೇಖಾ ಕದಿರೇಶ್ ಮೇಲೆ ಕಿರಾತಕರು ಮುಂಜಾನೆಯಿಂದಲೇ ನಿಗಾ ಇಟ್ಟಿದ್ದರು. ಕಚೇರಿ ಹಾಗೂ ಮನೆ ಸುತ್ತ ಸುತ್ತಾಡಿದ್ದವರು, ಹತ್ಯೆಗೆ ಕಚೇರಿಯನ್ನೇ ನಿಗದಿ ಮಾಡಿದ್ದರು. ಅದಕ್ಕಾಗಿ ಕಚೇರಿಗೆ ಹಾಕಿದ್ದ ಸಿಸಿಟಿವಿ ಕ್ಯಾಮರಾಗಳನ್ನು ಮೇಲಕ್ಕೆ ತಿರುಗಿಸಿ ಬರುವುದನ್ನೇ ಕಾಯುತ್ತಿದ್ದರು. ಬೆಳಗ್ಗೆ 8.30 ರ ಸುಮಾರಿಗೆ ಕಚೇರಿಗೆ ಬಂದಿದ್ದ ರೇಖಾ ಕದಿರೇಶ್ ಸಾರ್ವಜನಿಕರ ಅಹವಾಲು ಸ್ವೀಕರಿಸುತ್ತಿದ್ದರು. ಈ ವೇಳೆ ಏಕಾಏಕಿ ಮೂವರು ನುಗ್ಗಿ ಹತ್ಯೆ ಮಾಡಿ ಪರಾರಿಯಾಗಿದ್ದಾರೆ. ಕದಿರೇಶ್ ಪತ್ನಿ ಪಾಲಿಕೆ ಸದಸ್ಯೆ ಆಗುವ ಮುನ್ನ ಅನೇಕರಿಗೆ ಉಪಟಳ ನೀಡಿದ್ದ. ಅದರ ಪ್ರತಿಕಾರಕ್ಕಾಗಿ ಆತನೇ ಜೀವ ಕಳೆದುಕೊಂಡಿದ್ದ. ಇದೀಗ ಏನೂ ಅರಿಯದ ಆತನ ಮುಗ್ಧ ಪತ್ನಿ ಕೂಡ ಭಕ್ಷಿ ಗಾರ್ಡನ್ ಪಾತಕ ಲೋಕಕ್ಕೆ ಬಲಿಯಾಗಿದ್ದಾರೆ.

**ರೇಖಾ ಪುತ್ರ ಹೇಳಿಕೆ:** ಪೀಟರ್ ನಮಗೆ ತುಂಬಾ ಆತ್ಮೀಯನಾಗಿದ್ದ. ಪೀಟರ್ ಮತ್ತು



ಆತನ ಸಹಚರರು ಕೊಲೆ ಮಾಡಿರುವುದು ಕಾಲ್ ಮಾಡಿದಾಗ ಗೊತ್ತಾಯಿತು. ನನಗೆ ಜೀವ ಭಯವಿದ್ದ ಕಾರಣ ನನ್ನ ಸಹೋದರಿಯ ಮನೆಯಲ್ಲಿಯೇ ಇದ್ದೆ. ಪ್ರತಿ ದಿನ ಕರೆ ಮಾಡಿ ಪೀಟರ್ ಮಾತನಾಡುತ್ತಿದ್ದ. ಊಟ ಹಂಚುವ ಕೆಲಸ ಮಾಡುತ್ತಿದ್ದೆವು. ನಮ್ಮ ತಾಯಿಗೂ ಜೀವ ಭಯವಿತ್ತು. ಈ ವಿಚಾರವನ್ನು ತಾಯಿಗೆ ಹೇಳಿದರೂ, ನನಗೆ ಯಾವುದೇ ಭಯವಿಲ್ಲ ಎಂದು ಹೇಳಿದ್ದರು. ಅಮ್ಮನಿಗೆ ಜೀವ ಭಯ ಇರುವ ಬಗ್ಗೆ ಅವರು ಯಾವತ್ತೂ ನಮ್ಮ ಜತೆ ಹೇಳಿಕೊಂಡಿರಲಿಲ್ಲ ಎಂದು ರೇಖಾ ಕದಿರೇಶ್ ಪುತ್ರ ರಾಹುಲ್ ಪ್ರತಿಕ್ರಿಯೆ ನೀಡಿದ್ದಾನೆ.

**ರೇಖಾ ನನ್ನ ತಂಗಿ ಇದ್ದ ಹಾಗೆ :** ರೇಖಾ ಕದಿರೇಶ್ ಹತ್ಯೆಯಾಗಿರುವುದು ನನಗೆ ಶಾಕ್ ಆಗಿದೆ. ರೇಖಾ ನನ್ನ ತಂಗಿ ತರ ಇದ್ದರು. 2018 ರಲ್ಲಿ ಅವರ ಪತಿ ಕೊಲೆಯಾದರು. ಈಗ ಅವರ ಪತ್ನಿ ಕೊಲೆಯಾಗಿದ್ದಾರೆ. ಜನ ಪ್ರತಿನಿಧಿಗಳಿಗೆ ರಕ್ಷಣೆ ಇಲ್ಲದಂತಾಗಿದೆ. ತಪ್ಪಿಸ್ಥರನ್ನು ಹಿಡಿದು ಗಲ್ಲಿಗೇರಿಸಬೇಕು. ರೇಖಾ ನನ್ನ ಸಹೋದರಿ ಇದ್ದಂತೆ. ಅವರ ಮಕ್ಕಳಿಗೆ ಆಸರೆಯಾಗುವೆ. ಅವರ ಮಕ್ಕಳನ್ನು ಕಾಪಾಡುವ ಕೆಲಸ ಮಾಡುತ್ತೇನೆ. ಯಾರದ್ದೋ ದ್ವೇಷಕ್ಕೆ ಯಾರನ್ನು ಬಲಿ ಪಡೆಯುವುದು ಎಷ್ಟು ಸರಿ ಎಂದು ಶಾಸಕ ಜಮೀರ್ ಪ್ರಶ್ನಿಸಿದರು.

ರೇಖಾ ಕದಿರೇಶ್ ಹತ್ಯೆ ಹಿಂದೆ ರಾಜಕೀಯ ಅಡಗಿದೆ ಎಂದು ಎನ್.ಆರ್. ರಮೇಶ್ ಅರೋಪ ಮಾಡಿದ್ದಾರೆ. ರಮೇಶ್‌ಗೆ ನಾನು ಕನಸಲ್ಲಿ ಕಾಡ್ತಾ ಇದ್ದೀನಿ ಅನ್ಸುತ್ತೆ. ವಿನಾಃಕಾರಣ ಆರೋಪ ಮಾಡುವುದು ಸರಿಯಲ್ಲ. ರೇಖಾ ಬಿಜೆಪಿಯಲ್ಲಿದ್ದವರು. ನಾನು ಜೆಡಿಎಸ್‌ನಿಂದ ಗೆದ್ದಿರುವವನು. ಚುನಾವಣೆ ವೇಳೆ ರಾಜಕೀಯಕ್ಕೆ ಸೀಮಿತ. ಉಳಿದಂತೆ ನನ್ನ ಸಹೋದರಿ ರೀತಿ ಇದ್ದರು ಎಂದು ಇದೇ ವೇಳೆ ಜಮೀರ್ ಪ್ರತಿಕ್ರಿಯೆ ನೀಡಿದ್ದಾರೆ.

## ಬಲಿದಾನ್ ದಿವಸ್, ಜಗನ್ನಾಥ್‌ರಾವ್ ಜೋಷಿ ಜನ್ಮದಿನಾಚರಣೆ

ಹಲಗೂರು: ಇಲ್ಲಿನ ಮಹಾಶಕ್ತಿ ಕೇಂದ್ರದಲ್ಲಿ ಜನ ಸಂಘದ ಸಂಸ್ಥಾಪಕರಾದ ಶ್ಯಾಮ್ ಪ್ರಕಾಶ್ ಮುಖರ್ಜಿ ಪುಣ್ಯ ಸ್ಮರಣೆ ಅಂಗವಾಗಿ ಬಲಿದಾನ್ ದಿವಸ್ ಮತ್ತು ಜಗನ್ನಾಥ್‌ರಾವ್ ಜೋಷಿ ಜನ್ಮದಿನಾಚರಣೆ ಕಾರ್ಯಕ್ರಮ ನಡೆಯಿತು.

ಬಿಜೆಪಿ ತಾಲೋಕು ಉಪಾಧ್ಯಕ್ಷ ನಂದೀಪುರಕುಮಾರ್ ಮಾತನಾಡಿ, ಮುಖರ್ಜಿಯವರು ಸ್ವಾತಂತ್ರ್ಯೋತ್ತರದಲ್ಲಿ ಹಿಂದೂಗಳ ಮೇಲಿನ ಶೋಷಣೆಯ ವಿರುದ್ಧ ಪ್ರಮುಖ ಧ್ವನಿಯಾಗಿದ್ದರು. ಜನ ಸಂಘ ಪಕ್ಷ ಕಟ್ಟಿ ಜಮ್ಮು–ಕಾಶ್ಮೀರದಲ್ಲಿನ ಹಿಂದೂಗಳ ಪರವಾಗಿ ತಮ್ಮ ಜೀವವನ್ನೇ ತ್ಯಾಗ ಮಾಡಿದ ಮಹಾನ್ ನಾಯಕ ಎಂದು ಬಣ್ಣಿಸಿದರು.

ಪ್ರತಿ ಕಾರ್ಯದಲ್ಲೂ ಮಾತಿನಲ್ಲೂ ದೇಶಾಭಿಮಾನ ಎದ್ದು ಕಾಣುತ್ತಿತ್ತು. ದುಷ್ಟ ಶಕ್ತಿಗಳಿಂದ ದೇಶ ವಿಭಜಿಸುವ ಹುನ್ನಾರ



ನಡೆದಾಗ ಪ್ರತಿ ಹಂತದಲ್ಲಿಯೂ ಪ್ರಬಲವಾಗಿ ವಿರೋಧಿಸುತ್ತಾ ಬಂದರು. ದೇಶದ ಏಕತೆ ಅಖಂಡತೆಗೆ ಅವರಿಗಿದ್ದ ಪ್ರೇಮ, ಕಾಳಜಿ, ಪ್ರತಿಯೊಬ್ಬ ಭಾರತೀಯನಿಗೆ ಅವರ ಮೇಲೆ ಅಪಾರ ಗೌರವ ಮೂಡಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ಸಾಮಾಜಿಕ ಜಾಲ ತಾಣದ ಸಂಚಾಲಕ ಬಾಲಚಂದ್ರ, ಗ್ರಾಮ ಪಂಚಾಯಿತಿ ಸದಸ್ಯ ಶಿವಕುಮಾರ್, ಮುಖಂಡರಾದ ನಾಗೇಶ್ ಗೊಲ್ಲರಹಳ್ಳಿ, ಅಭಿಜಿತ್ ಬಸವರಾಜು ಇದ್ದರು.

## ಬೆಲೆಬಾಳುವ ಮರಗಳು ಬೆಂಕಿಗಾಹುತಿ


ಪಾಂಡವಪುರ : ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಆಕಸ್ಮಿಕ ಬೆಂಕಿ ಬಿದ್ದು ಮನೆ ಕಟ್ಟಲು ಬಳಸುವ ಲಕ್ಷಾಂತರ ರೂಪಾಯಿ ಬೆಲೆಬಾಳುವ ಮರಗಳು ಬೆಂಕಿಗಾಹುತಿಯಾಗಿರುವ ಘಟನೆ ತಾಲೂಕಿನ ಎಲೆಕೆರೆ ಹ್ಯಾಂಡ್‌ಪೋಸ್ಟ್ ಬಳಿ ನಿನ್ನೆ ರಾತ್ರಿ ಜರುಗಿದೆ.

ತಾಲೂಕಿನ ಹುಲ್ಕೆರೆಕೊಪ್ಪಲು ನಿವಾಸಿ ಕುಮಾರ್ ಎಂಬುವರಿಗೆ ಸೇರಿದ ಕೆ.ಬಿ.ಟಿಂಬರ್ ಗೋದಾಮಿಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಬೆಂಕಿ ಬಿದ್ದ ಪರಿಣಾಮ ಸುಮಾರು 30 ಲಕ್ಷ ರೂ. ಮೌಲ್ಯದ ತೇಗ, ಬೇವು ಹಾಗೂ ಹೊನ್ನೆ ಮರಗಳು ಭಸ್ಮವಾಗಿವೆ ಎನ್ನಲಾಗಿದೆ.

ತಾಲೂಕಿನ ಎಲೆಕೆರೆ ಹ್ಯಾಂಡ್‌ಪೋಸ್ಟ್ ಬಳಿಯ ಕೆಆರ್‌ಎಸ್ ಮುಖ್ಯರಸ್ತೆಯಲ್ಲಿರುವ ಕೆ.ಬಿ.ಟಿಂಬರ್ ಗೋದಾಮಿಗೆ ಬುಧವಾರ ರಾತ್ರಿ ಸುಮಾರು 11ರ ಸಮಯದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಬೆಂಕಿ ಹೊತ್ತಿಕೊಂಡಿದೆ. ತಕ್ಷಣವೇ ಅಕ್ಕಪಕ್ಕದ ನಿವಾಸಿಗಳು ಗೋದಾಮಿನ ಮಾಲೀಕ ಹುಲ್ಕೆರೆಕೊಪ್ಪಲು ಕುಮಾರ್‌ಗೆ ವಿಷಯ ತಿಳಿಸಿದ್ದಾರೆ. ತಕ್ಷಣವೇ ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ವರ್ಗದವರು ಧಾವಿಸಿ ಬೆಂಕಿ ನಂದಿಸಿದ್ದಾರೆ. ಅಷ್ಟರಲ್ಲಿ ಮರಗಳು ಸಂಪೂರ್ಣ ಬೆಂಕಿಗಾಹುತಿಯಾಗಿವೆ. ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.



ಕ್ರಾಂತಿಯಕಿಡಿ
ಪುಟ–04
ಶನಿವಾರ
26 ಜೂನ್ 2021
ಕಾಯಕಯೋಗಿ
KAYAKAYOGI-MORNING DAILY ಕನ್ನಡ ದಿನಪತ್ರಿಕೆ



ಮದ್ದೂರು ಪಟ್ಟಣದ ಮಹಿಳಾ ಸರ್ಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್‌ಗಳನ್ನು ಶಾಸಕ ಡಿ.ಸಿ. ತಮ್ಮಣ್ಣ ವಿತರಿಸಿದರು.



ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅಪಮಾನ ಮಾಡಿರುವ ವ್ಯಕ್ತಿಯನ್ನು ಬಂಧಿಸುವಂತೆ ಒತ್ತಾಯಿಸಿ ಸುರೇಶ್ ಅವರ ನೇತೃತ್ವದಲ್ಲಿ ಮದ್ದೂರು ಪಿಎಸ್‌ಐ ಅವರಿಗೆ ಮನವಿ ಪತ್ರ ಸಲ್ಲಿಸಿದರು.

**ಆರೋಗ್ಯದಿಂದಿರಿ–ಸುರಕ್ಷಿತವಾಗಿರಿ, ನಾವೆಲ್ಲೂರು ಒಟ್ಟಾಗಿ ಕೊರೋನಾ ವಿರುದ್ಧ ಹೋರಾಡೋಣ.**

## ಕಾಯಕಯೋಗಿ ಮಾಸ್ಕ್ ಅಭಿಯಾನ




ಇಡೀ ವಿಶ್ವವನ್ನೇ ಬೆಚ್ಚಿಬೀಳಿಸಿರುವ ಮಹಾಮಾರಿ ಕೊರೋನಾ ತಡೆಗಟ್ಟುವುದು ಇಂದಿನ ಜರೂರು ಪರಿಸ್ಥಿತಿ.
ಪ್ರತಿಯೊಬ್ಬರು ಕಡ್ಡಾಯವಾಗಿ ಮಾಸ್ಕ್ ಧರಿಸಿ ಸೆಲ್ಫಿ ಕಳಿಸಿ ಮಾಸ್ಕ್ ತೊಟ್ಟ ನಿಮ್ಮ ಭಾವಚಿತ್ರವನ್ನು ಕಾಯಕಯೋಗಿ ಪ್ರಕಟಿಸಲಿದೆ.
ಬಿ.ಕೆ.ಅರುಣಜ್ಯೋತಿ, ಸಂಪಾದಕಿ ಕಾಯಕಯೋಗಿ ದಿನಪತ್ರಿಕೆ, ಮಂಡ್ಯ, ಮೊ:9980605484

**ಸರ್ಕಾರದ ನಿಯಮಾವಳಿ ಪಾಲಿಸೋಣ**
**ಮಹಾಮಾರಿ ಕರೋನಾ ಓಡಿಸೋಣ**

## ಕಾಯಕಯೋಗಿ ಕಾಳಜಿ




## ಸಸಿ ನೆಡೋಣ–ಕರೋನಾ ಓಡಿಸೋಣ



*ಇಡೀ ವಿಶ್ವವನ್ನೇ ತಲ್ಲಣಗೊಳಿಸಿರುವ ಮಹಾಮಾರಿ ಕರೋನಾ ಸೋಂಕಿನಿಂದ ಪ್ರತಿನಿತ್ಯ ಸಾವಿರಾರು ಸಾವು–ನೋವುಗಳು ಸಂಭವಿಸುತ್ತಿವೆ. ಸ್ವಾರ್ಥಕ್ಕಾಗಿ ಪರಿಸರ ನಾಶ ಮಾಡಿದ ಪರಿಣಾಮ ಆಕ್ಸಿಜನ್ ಕೊರತೆ ಮನುಷ್ಯನನ್ನು ಉಸಿರುಗಟ್ಟಿ ಸಾಯುವಂತೆ ಮಾಡಿದೆ. ಇಂತಹ ಸಂಕಷ್ಟದಿಂದ ಪಾರಗಲು ನಾಳಿನ ಭವಿಷ್ಯಕ್ಕೆ ಇಂದೇ ಸಸಿಯೊಂದನ್ನು ನೆಟ್ಟು ಮತ್ತೆ ಪ್ರಕೃತಿಯ ಮಡಿಲನ್ನು ಮತ್ತಷ್ಟು ಗಟ್ಟಿಗೊಳಿಸೋಣ. ಪ್ರತಿಯೊಬ್ಬರೂ ತಮ್ಮ ಮನೆಯಂಗಳ, ಗದ್ದೆ, ಹೊಲ, ಸರ್ಕಾರಿ ಜಾಗ, ಶಾಲಾ ಆವರಣ, ಗೋಮಾಳದಲ್ಲಿ ಸಸಿಗಳನ್ನು ನೆಟ್ಟು ಸಸ್ಯಸಂಕುಲದ ಸಮೃದ್ಧಿಗೆ ಮುಂದಾಗೋಣ.*
***ನೀವು ಸಸಿನೆಟ್ಟ ಪೋಟೋ ನಮಗೆ ವಾಟ್ಸ್‌ಪ್ ಮಾಡಿ.***
***ಮೊ : 9343230788.***

## ನೋಬೆಲ್ ವರ್ಲ್ಡ್ ರೆಕಾರ್ಡ್ ಪುರಸ್ಕಾರ



ಮಂಡ್ಯ ನಗರದ ಕರಾಟೆಪಟು ಆರ್.ಶಶಾಂಕ್ ಅವರು ಒಂದು ನಿಮಿಷಕ್ಕೆ 62 ಕಿಕ್ ನೀಡುಮೂಲಕ ನೋಬೆಲ್ ವರ್ಲ್ಡ್ ರೆಕಾರ್ಡ್ ಪುರಸ್ಕಾರಕ್ಕೆ ಪಾತ್ರರಾಗಿ ಜಿಲ್ಲೆಗೆ ಕೀರ್ತಿತಂದಿದ್ದಾರೆ.

# ವಿದ್ಯುತ್ ಶಾರ್ಟ್ ಸರ್ಕ್ಯೂಟ್ : ಕಬ್ಬು ಭಸ್ಮ

ಪಾಂಡವಪುರ : ರೈತರ ಜಮೀನಿನ ಮೇಲೆ ಜೋತು ಬಿದ್ದಿದ್ದ ವಿದ್ಯುತ್ ತಂತಿಯಿಂದಾಗಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾದ ಪರಿಣಾಮ ಕಬ್ಬಿನ ಗದ್ದೆಗೆ ಬೆಂಕಿ ಬಿದ್ದು ಕಬ್ಬಿನ ಫಸಲು ನಾಶವಾಗಿರುವ ಘಟನೆ ತಾಲೂಕಿನ ಹೆಗ್ಗಡಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಕೆಂಪರಾಜು ಎಂಬುವವರಿಗೆ ಸೇರಿದ ಎರಡು ಎಕರೆಯಷ್ಟು ಕಬ್ಬು ಸಂಪೂರ್ಣ ಬೆಂಕಿಗಾಹುತಿಯಾಗಿದೆ. ತಕ್ಷಣ ಅಕ್ಕಪಕ್ಕದ ಜಮೀನಿನ ರೈತರೆಲ್ಲರೂ ಸೇರಿ ಬೆಂಕಿ ನಂದಿಸುವ ಪ್ರಯತ್ನ ಮಾಡಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಅಷ್ಟರಲ್ಲಿ ಕಬ್ಬಿನ ಫಸಲು ಸಂಪೂರ್ಣ ಭಸ್ಮವಾಗಿತ್ತು ಎನ್ನಲಾಗಿದೆ.

ಇಂದಿನ ಘಟನೆಗೆ ಸೆಸ್ಕ್ ಇಲಾಖೆ ಅಧಿಕಾರಿಗಳ ಬೇಜಬಾವ್ದಾರಿಯೇ ಕಾರಣವಾಗಿದೆ. ಸೆಸ್ಕ್ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಆಗ್ಗಿಂದಾಗ್ಗೆ ಈ ರೀತಿಯ ಘಟನೆಗಳು ಮರುಕಳಿಸುತ್ತಿವೆ. ಹೀಗಾಗಿ ಕಬ್ಬು ನಷ್ಟಕ್ಕೊಳಗಾದ ರೈತ ಕೆಂಪರಾಜು ಅವರಿಗೆ ಸೆಸ್ಕ್ ಇಲಾಖೆ ವತಿಯಿಂದ ಸೂಕ್ತ ಪರಿಹಾರ ಒದಗಿಸಬೇಕು ಎಂದು ರೈತರು ಆಗ್ರಹಿಸಿದರು.



## ನಾಡಪ್ರಭು ಕೆಂಪೇಗೌಡ ಜಯಂತಿ

ಮಂಡ್ಯ : ಕೋವಿಡ್–19 ರ ಹಿನ್ನೆಲೆಯಲ್ಲಿ ವಾರಾಂತ್ಯದಲ್ಲಿ ಲಾಕ್‌ಡೌನ್ ಕರ್ಫ್ಯೂ ಜಾರಿಯಲ್ಲಿರುವುದರಿಂದ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಜೂ.27 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿಯ ಸಭಾಭವನದಲ್ಲಿ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುತ್ತದೆ ಎಂದು ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ವಿದ್ಯುತ್ ವ್ಯತ್ಯಯ

ಪಾಂಡವಪುರ : ಸೆಸ್ಕ್ ಇಲಾಖೆಯ ಪಾಂಡವಪುರ ಉಪವಿಭಾಗ ವ್ಯಾಪ್ತಿಯ 66/11 ಕೆ.ವಿ ಚಿನಕುರಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಜೂ.26ರಂದು ತ್ರೈಮಾಸಿಕ ನಿರ್ವಹಣೆ ಕಾರ್ಯವನ್ನು ನಿರ್ವಹಿಸಲು ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಅಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಮಹದೇಶ್ವರಪುರದ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಬರುವ ಎಲ್ಲಾ 11 ಕೆ.ವಿ ವಿದ್ಯುತ್ ಸರಬರಾಜು ಮಾರ್ಗಗಳಲ್ಲಿನ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಆದ್ದರಿಂದ ಗ್ರಾಹಕರು ಎಂದಿನಂತೆ ನಿಗಮದ ಜತೆ ಸಹಕರಿಸಬೇಕು ಎಂದು ಸೆಸ್ಕ್ ಎಇಇ ವಿ.ಪುಟ್ಟಸ್ವಾಮಿ ಪ್ರಕಟಣೆಯಲ್ಲಿ ಕೋರಿದ್ದಾರೆ.

# ಹೆಣ್ಣು ಅನಾಪಿಲಿಸ್ ಸೊಳ್ಳೆಯಿಂದ ಮಲೇರಿಯ



ಶ್ರೀರಂಗಪಟ್ಟಣ : ಹೆಣ್ಣು ಅನಾಪಿಲಿಸ್ ಸೊಳ್ಳೆಯಿಂದ ಹರಡುವ ಮಲೇರಿಯ ಕಾಯಿಲೆಯನ್ನು ಮುಂಜಾಗೃತ ಕ್ರಮಗಳಿಂದ ನಿಯಂತ್ರಿಸಬಹುದು ಎಂದು ಹೆಚ್ಚುವರಿ ತಾಲ್ಲೂಕು ಆರೋಗ್ಯಾಧಿಕಾರಿಗಳಾದ ಡಾ॥ ಸಿ.ಎಸ್. ಸೌಮ್ಯ ತಿಳಿಸಿದರು.

ಪಟ್ಟಣದ ಸಂತೆಮಾಳದಲ್ಲಿನ ಪಶುಚಿಕಿತ್ಸಾ ಕೇಂದ್ರದ ಆವರಣದಲ್ಲಿ ನಡೆದ ಮಲೇರಿಯ ವಿರೋದಿ ಮಾಸಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಯಾವುದೇ ಜ್ವರವಿದ್ದರೂ ಸಹ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ರಕ್ತ ಪರೀಕ್ಷೆ ಮಾಡಿಸಿ, ಮಲೇರಿಯಾ ದೃಡಪಟ್ಟಾಗ ಉಚಿತ ತೀವ್ರ ಚಿಕಿತ್ಸೆ ಪಡೆದುಕೊಳ್ಳುವಂತೆ ಅವರು ಸಲಹೆ ನೀಡಿದರು.

ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಜಿ.ಮೋಹನ್‌ರವರು ಮಾತನಾಡಿ, ಸೊಳ್ಳೆಗಳ ಜೀವನಚಕ್ರ, ಮೊಟ್ಟೆಗಳು, ಲಾರ್ವ, ಪ್ಯೂಪ ಹಾಗೂ ವಯಸ್ಕ ಸೊಳ್ಳೆಗಳನ್ನು ಬಾಟಲಿಯಲ್ಲಿ ಸಂಗ್ರಹಿಸಿ ಪ್ರಾತ್ಯಕ್ಷತೆ ಮೂಲಕ ತೋರಿಸಿ ಸೊಳ್ಳೆ ನಿಯಂತ್ರಣದ ಬಗ್ಗೆ ಜಾಗೃತಿ ಮೂಡಿಸಿದರು.

ಪುರಸಭಾ ಸದಸ್ಯ ಗಂಜಾಂ ಶಿವು, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ. ಬೆನ್ನೂರ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಸಿದ್ದೇಗೌಡ, ರಾಜು, ಚಂದನ್, ಪಣೀಂದ್ರ, ಪ್ರಾಥಮಿಕ ಸುರಕ್ಷಾಧಿಕಾರಿಗಳಾದ ಬಿ.ಮಂಗಳ, ರಬೇಕ ಹಾಗೂ ಆಶಾ ಕಾರ್ಯಕರ್ತೆಯರು ಇತರರು ಹಾಜರಿದ್ದರು.

## ಸೇವಾಕಿರಣ ವೃದ್ಧಾಶ್ರಮಕ್ಕೆ ನಾಲ್ವಡಿ ಲಯನ್ಸ್ ನೆರವು

ಮಂಡ್ಯ ನಾಲ್ವಡಿ ಲಯನ್ಸ್ ಕ್ಲಬ್ ವತಿಯಿಂದ ಮಂಡ್ಯ ನಗರದ ಸುಭಾಷ್ ನಗರದಲ್ಲಿರುವ ಸೇವಾಕಿರಣ ವೃದ್ಧಾಶ್ರಮಕ್ಕೆ ಅಗತ್ಯವಾಗಿದ್ದ ಮಿಕ್ಸಿಯನ್ನು ಕೊಡುವುದರ ಜೊತೆಗೆ ಗೋಧಿ ಹಿಟ್ಟು, ಸಕ್ಕರೆ, ಕಡ್ಲೆಕಾಯಿ ಬೀಜ, ಕಡ್ಲೆಕಾಳು, ಅವರೆಕಾಳು ,ಟೀ ಪುಡಿ, ಕಾಫಿಪುಡಿ ಮುಂತಾದ ಆಹಾರ ಪದಾರ್ಥಗಳನ್ನು ನೀಡಲಾಯಿತು.

ಕ್ಲಬ್ ಅಡ್ಮಿನ್ ಲಯನ್ ಹನುಮಂತಯ್ಯ ತಳಗವಾದಿ ಮಾತನಾಡಿ, ಹಸಿವು ನಿವಾರಣೆ ಲಯನ್ಸ್ ಕ್ಲಬ್ನ ಧ್ಯೇಯವಾಗಿದೆ. ಕೋವಿಡ್–19ರ ಮೊದಲ ಅಲೆಗಿಂತ ಎರಡನೇ ಅಲೆಯ ಪರಿಣಾಮದಿಂದ ರಾಷ್ಟ್ರದಲ್ಲಿ ಸಾಕಷ್ಟು ಸಾವು ನೋವುಗಳು ಸಂಭವಿಸಿದೆ. ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದಿರುವುದು ಮತ್ತು ತಜ್ಞರ ಅಭಿಪ್ರಾಯವನ್ನು ಕಡೆಗಣಿಸಿದ್ದು ಕರೋನ ಭೀಕರತೆ ಹೆಚ್ಚಾಗಲು ಕಾರಣವಾದವು. ಲಾಕ್ಡೌನ್ ಮಾಡಿರುವುದರಿಂದ ಉದ್ಯೋಗವಿಲ್ಲದೆ ಸಾಮಾನ್ಯ ಜನರ ಬದುಕು ದುಸ್ತರವಾಗಿದೆ. ಊಟಕ್ಕೂ ಪರದಾಡುವ ಪರಿಸ್ಥಿತಿ ಬಂದಿದೆ. ಇಂತಹ ಸಂದರ್ಭದಲ್ಲಿ ಸೇವಾ ಸಂಸ್ಥೆಗಳು ಅಗತ್ಯವಿರುವವರಿಗೆ ಫುಡ್ ಕಿಟ್‌ಗಳನ್ನು ನೀಡುವ ಮೂಲಕ ಹಸಿವನ್ನು ನೀಗಿಸುವ ಮಾನವೀಯ ಕೆಲಸ ಮಾಡುತ್ತಿವೆ ಎಂದರು.

ನಾಲ್ವಡಿ ಲಯನ್ಸ್ ಕ್ಲಬ್ ನಗರದಲ್ಲಿರುವ ವಿಶೇಷ ಚೇತನ ಮಕ್ಕಳಿರುವ ಸಂಸ್ಥೆಗಳಿಗೆ ಮತ್ತು ಹಿರಿಯರಿರುವ ವೃದ್ಧಾಶ್ರಮಗಳಿಗೆ ಅಗತ್ಯವಾದ ಆಹಾರ ಪದಾರ್ಥಗಳನ್ನು ನೀಡುವ ಮೂಲಕ ಸಮಾಜದ ಋಣ ತೀರಿಸುವ ಕೆಲಸ ಮಾಡುತ್ತಿದೆ. ಸಾಮಾಜಿಕ ಮೌಲ್ಯಗಳ ಅರಿವು ಇಂದಿನ ಯುವಜನರಿಗೆ ಇಲ್ಲದಿರುವುದು ಮತ್ತು ಪಾಶ್ಚಿಮಾತ್ಯ ಜೀವನ ಶೈಲಿಯ ಅನುಕರಣೆಯಿಂದಾಗಿ ಭಾರತದಲ್ಲಿ ವೃದ್ಧಾಶ್ರಮಗಳು ಹೆಚ್ಚಾಗಲು ಕಾರಣವಾಗಿದೆ.ಹಿರಿಯರು ಕುಟುಂಬದ ಅವಿಭಾಜ್ಯ ಅಂಗವಾಗಿದ್ದಾರೆ. ಅಂತಹ ಹಿರಿಯರನ್ನು ಕಡೆಗಣಿಸುವುದು ತರವಲ್ಲ,ಪ್ರೀತಿ, ವಾತ್ಸಲ್ಯದಿಂದ ನೋಡಿ ಕೊಳ್ಳಬೇಕಾಗಿದೆ ಎಂದು ತಿಳಿಸಿದರು

ಕ್ಲಬ್ನ ಅಧ್ಯಕ್ಷರಾದ ಲಯನ್ ಚಂದ್ರಲಿಂಗುರವರು ಮಿಕ್ಸಿ ಹಾಗೂ ಆಹಾರ ಪದಾರ್ಥಗಳನ್ನು ಸೇವಾಕಿರಣ ಚಾರಿಟಬಲ್ ಟ್ರಸ್ಟ್ನ ಅಧ್ಯಕ್ಷರಾದ ಜಿ ವಿ ನಾಗರಾಜ್ ರವರಿಗೆ ಹಸ್ತಾಂತರಿಸಿದರು

ಕ್ಲಬ್ ಕಾರ್ಯದರ್ಶಿ ಲಯನ್ ಧನಂಜಯ ದರಸಗುಪ್ಪೆ, ಖಜಾಂಚಿ ಲಯನ್ ಕೆ ಶಿವಲಿಂಗಯ್ಯ ಭಾಗವಹಿಸಿದ್ದರು.

## ಜೂ.27ರಂದು ಸರಳ ಕೆಂಪೇಗೌಡ ಜಯಂತ್ಯೋತ್ಸವ

ಪಾಂಡವಪುರ : ಇದೇ ಜೂನ್ 27ರಂದು ನಾಡಪ್ರಭು ಕೆಂಪೇಗೌಡರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಕೊರೊನಾ ಎರಡನೇ ಅಲೆ ತೀವ್ರವಾಗಿರವ ಹಿನ್ನೆಲೆಯಲ್ಲಿ ಅತ್ಯಂತ ಸರಳ ರೀತಿಯಲ್ಲಿ ಆಚರಿಸಲು ಅಖಿಲ ಕರ್ನಾಟಕ ಒಕ್ಕಲಿಗರ ಒಕ್ಕೂಟ ನಿರ್ಧರಿಸಿದೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಅಧ್ಯಕ್ಷ ಬಿ.ಕೆ.ಯೋಗೇಶ್ ಅಧ್ಯಕ್ಷತೆಯಲ್ಲಿ ನಡೆದ ಒಕ್ಕೂಟದ ಪೂರ್ವಭಾವಿ ಸಭೆಯಲ್ಲಿ ಈ ಕುರಿತು ಸರ್ವಾನುಮತದ ನಿರ್ಣಯ ಕೈಗೊಳ್ಳಲಾಯಿತು.

ಸಭೆಯಲ್ಲಿ ಅಧ್ಯಕ್ಷ ಬಿ.ಕೆ.ಯೋಗೇಶ್ ಮಾತನಾಡಿ, ಕೊರೊನಾ ಎರಡನೇ ಅಲೆಯು ಕರ್ನಾಟಕ ರಾಜ್ಯವಲ್ಲದೇ, ಇಡೀ ದೇಶವನ್ನು ಬೆಂಬಿಡದೆ ಕಾಡುತ್ತಿದೆ. ಹೀಗಾಗಿ ನಾಡಪ್ರಭು ಕೆಂಪೇಗೌಡರ ಜಯಂತ್ಯೋತ್ಸವವನ್ನು ಅದ್ದೂರಿ ಆಚರಣೆ ಬದಲಿಗೆ ಅತ್ಯಂತ ಸರಳವಾಗಿ ಆಚರಿಸೋಣ. ಪಟ್ಟಣದ ಐದು ದೀಪದ ವೃತ್ತದಲ್ಲಿ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಆಸ್ಪತ್ರೆ ರೋಗಿಗಳು ಹಾಗೂ ಕೋವಿಡ್ ಸೋಂಕಿತರಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಕೆಂಪೇಗೌಡರ ಜಯಂತಿ ಕಾರ್ಯಕ್ರಮವನ್ನು ಬಹಳ ಅರ್ಥಪೂರ್ಣವಾಗಿ ಆಚರಿಸೋಣ. ಇದರ ಜತೆಗೆ ಪ್ರತಿ ಗ್ರಾಮಗಳಲ್ಲಿ ಹಾಗೂ ಎಲ್ಲಾ ಹೋಬಳಿ ಕೇಂದ್ರಗಳಲ್ಲೂ ಒಕ್ಕಲಿಗ ಸಮಾಜದ ಬಂಧುಗಳು ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಅರ್ಪಿಸುವ ಮೂಲಕ ಕೆಂಪೇಗೌಡರ ಜಯಂತಿ ಕಾರ್ಯಕ್ರಮವನ್ನು ಈ ಬಾರಿ ಅತ್ಯಂತ ಸರಳವಾಗಿ ಆಚರಣೆ ಮಾಡಿ, ಮುಂದಿನ ವರ್ಷ ಅದ್ದೂರಿಯಾಗಿ ಆಚರಿಸೋಣ ಎಂದರು.

ಈ ವೇಳೆ ತಾಲೂಕು ಯುವ ಘಟಕದ ಅಧ್ಯಕ್ಷ ದೀಪು, ರಾಜ್ಯ ಘಟಕದ ನಿರ್ದೇಶಕ ಸಿ.ಆರ್.ರಮೇಶ್, ತಾಲೂಕು ಘಟಕದ ಪತ್ರಿಕಾ ಕಾರ್ಯದರ್ಶಿ ಎನ್.ಕೃಷ್ಣೇಗೌಡ ಇತರರು ಧ್ವನಿಗೂಡಿಸಿ ಈ ನಾಡು ಕಟ್ಟಿದ ನಾಡಪ್ರಭು ಕೆಂಪೇಗೌಡರ ಜಯಂತ್ಯೋತ್ಸವವನ್ನು ಈ ಬಾರಿ ಸರಳವಾಗಿ ಆಚರಿಸೋಣ. ಕೋವಿಡ್ ಕಡಿಮೆಯಾದ ವೇಳೆ ಬಹಳ ವಿಜೃಂಭಣೆಯಿಂದ ಆಚರಿಸೋಣ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯಲ್ಲಿ ಹಾರೋಹಳ್ಳಿ ಎಚ್.ಕೆ.ಜನಾರ್ಧನ್, ಚಿಟ್ಟನಹಳ್ಳಿ ಮಹೇಶ್, ಎಂ.ಎಸ್.ಕುಮಾರ್, ಚಿಕ್ಕಮರಳಿ ಚಂದ್ರಶೇಖರ್, ಎಪಿಎಂಸಿ ಸಂತೋಷ್, ಪಟೇಲ್ ಕೃಷ್ಣೇಗೌಡ, ಕೆರೆತೊಣ್ಣೂರು ಜಯರಾಂ, ಕುಪ್ಪಳ್ಳಿ ಗಂಗಾಧರ್, ಹಾರೋಹಳ್ಳಿ ಕುಮಾರ್, ಕೆಂಪೇಗೌಡ, ಚಿರಂಜೀವಿ, ದಿನೇಶ್, ಪ್ರಕಾಶ್‌ರಾಜ್‌ಗೌಡ, ಹಿರೇಮರಳಿ ಗುರು, ನವೀನ್, ಧರ್ಮೇಂದ್ರ, ಮಧುಸೂದನ್, ಎಚ್.ಆರ್.ರಾಜಶೇಖರ್, ಎಚ್.ಎನ್.ಅಶೋಕ, ಎಚ್.ಆರ್.ಶಿವಕುಮಾರ, ಕೆ.ಹೇಮಕುಮಾರ್, ಮೋಹನಕುಮಾರ್, ನಟರಾಜು, ಸುರೇಶ್ ಇತರರಿದ್ದರು.

# ಸಾಕು ಹಂದಿ ಹಿಂದಿರುಗಿಸಲು ಮನವಿ

ಶ್ರೀರಂಗಪಟ್ಟಣ : ಯಾವುದೇ ಸೂಚನೆಗಳನ್ನು ನೀಡದೆ ಗೂಡಿನಲ್ಲಿ ಸಾಕಿದ್ದ ಹಂದಿಗಳನ್ನು ಬಲವಂತವಾಗಿ ಪುರಸಭೆ ಅಧಿಕಾರಿಗಳ ಹೊತ್ತೊಯ್ದಿದ್ದಾರೆ ಎಂದು ಹಂದಿ ಮಾಲೀಕರು ಆಕ್ರೋಶ ವ್ಯಕ್ತಪಡಿಸಿ ಪುರಸಭೆ ಉಪಾಧ್ಯಕ್ಷರಿಗೆ ದೂರು ನೀಡಿದ್ದಾರೆ.

ಪಟ್ಟಣದ ಹೊರ ಭಾಗದಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಸಾಕಲಾಗಿದ್ದ ಹಂದಿಗಳನ್ನು ಪುರಸಭೆ ಅಧಿಕಾರಿಗಳು ಮಾಹಿತಿ ನೀಡಿದೆ ಎತ್ತಿಕೊಂಡು ಹೋಗಿದ್ದಾರೆ. ನಮ್ಮ ಕುಲ ಕಸಬು ಹಂದಿ ಸಾಕಾಣೆ ಬಿಟ್ಟರೆ ನಮಗೆ ಬೇರೇ ಕೆಲಸ ನಮಗೆ ಗೊತ್ತಿಲ್ಲ, ವ್ಯಕ್ತಿಯೊಬ್ಬರು ಪಟ್ಟಣದ ರಸ್ತೆಗಳಲ್ಲಿ ಹಂದಿಗಳ ಕಾಟ ಹೆಚ್ಚಾಗಿದೆ ಎಂದು ದೂರು ನೀಡಿದ್ದ ಹಿನ್ನಲೆಯಲ್ಲಿ ಅಧಿಕಾರಿಗಳು ಈ ರೀತಿ ನಡೆದುಕೊಂಡಿದ್ದಾರೆ. ಹಂದಿಗಳನ್ನು ಹಿಂದಿರುಗಿಸುವಂತೆ ಹಂದಿಗಳ ಮಾಲೀಕರಾದ ಗಿರಿಜಾ, ವೆಂಕಟಮ್ಮ ಇತರರು ಪುರಸಭೆ ಉಪಾಧ್ಯಕ್ಷ ಪ್ರಕಾಶ್ ಅವರಿಗೆ ಮನವಿ ಸಲ್ಲಿಸಿದರು.



# ಕೆ.ಆರ್.ಪೇಟೆಗೆ 1537 ಕೋಟಿ ಅನುದಾನ : ಸಚಿವ



ಕೆ.ಆರ್.ಪೇಟೆ : ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದ ಮುಖ್ಯಮಂತ್ರಿಯಾಗಿರುವುದು ನಮ್ಮ ಸುದೈವ. ಜನ್ಮ ಭೂಮಿಯ ಅಭಿವೃದ್ಧಿಗಾಗಿ 1537 ಕೋಟಿ ರೂಗಳ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡಿದ್ದಾರೆ ಎಂದು ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ.ಸಿ.ನಾರಾಯಣಗೌಡ ಹೇಳಿದರು.

ಅವರು ತಾಲ್ಲೂಕಿನ ಮಾರ್ಗೋನಹಳ್ಳಿಯ ಶ್ರೀ ಮರಡಿ ಲಿಂಗೇಶ್ವರ ದೇವಸ್ಥಾನದ ಬಳಿ ತಾಲ್ಲೂಕು ಬಿಜೆಪಿ ಘಟಕವು ಹೀರಿಕಳಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಚುನಾವಣೆಯ ಸಂದರ್ಭದಲ್ಲಿ ಮಾತ್ರ ರಾಜಕೀಯ ಮಾಡೋಣ ಅಭಿವೃದ್ಧಿ ವಿಚಾರದಲ್ಲಿ ಪಕ್ಷಾತೀತವಾಗಿ ಸಹಕಾರ ಮುಖ್ಯ ಎಂದರು. ನಾನು 3 ಭಾರಿ ಶಾಸಕನಾಗಿ ಪ್ರಸ್ತುತ ಸಚಿವನಾಗಬೇಕಾದರೆ ಶ್ರೀ ಮರಡಿಲಿಂಗೇಶ್ವರ ಸ್ವಾಮಿಯ ಕೃಪಾಶೀರ್ವಾದವಿದೆ. ಕ್ಷೇತ್ರದ ಅಭಿವೃದ್ಧಿಗಾಗಿ ಒಂದು ನೀಲಿ ನಕ್ಷೆ ತಯಾರಿಸಿ ಹಂತ ಹಂತವಾಗಿ ಅಭಿವೃದ್ಧಿ ಪಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಮಹಾ ಮಾರಿ ಕೊರೋನದಿಂದಾಗಿ ಜನಜೀವನ ಅಸ್ತವ್ಯಸ್ಥವಾಗಿದ್ದು, ನಾಗರೀಕ ಬಂಧುಗಳು ಸಾಮಾಜಿಕ ಅಂತರ, ಆಗಾಗ ಕೈ ತೊಳೆಯುವುದು ಹಾಗೂ ಮಾಸ್ಕ್ ಧರಿಸಿ ಶುಚಿತ್ವ ಕಾಪಾಡುವ ಮೂಲಕ ರೋಗದಿಂದ ದೂರವಿರಬೇಕು ಎಂದರು.

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ್, ಜಿ.ಪಂ ಮಾಜಿ ಉಪಾಧ್ಯಕ್ಷ ಎಸ್. ಅಂಬರೀಶ್, ಕೆ.ಆರ್.ಪೇಟೆ ಮಂಡಲ ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್, ತಾಲ್ಲೂಕು ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಲತಾಮುರಳಿ, ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಕೆ.ಜಿ.ತಮ್ಮಣ್ಣ, ಪ್ರಧಾನ ಕಾರ್ಯದರ್ಶಿ ಚೋಕನಹಳ್ಳಿ ಪ್ರಕಾಶ್, ಹಿರೀಕಳಲೆ ಗ್ರಾ.ಪಂ ಅಧ್ಯಕ್ಷೆ ಮಮತಾ ರಘು, ಉಪಾಧ್ಯಕ್ಷ ಜಯರಾಮು, ಪುರಸಭೆ ಮಾಜಿ ಸದಸ್ಯ ಕೆ. ವಿನೋದ್‌ಕುಮಾರ್, ಕಾರ್ಯದರ್ಶಿ ಪುಟ್ಟಣ್ಣ, ಎಸ್.ಟಿ.ಮೋರ್ಚಾ ಅಧ್ಯಕ್ಷ ಮಹೇಶ್, ರೈತ ಮೋರ್ಚಾ ಶಿವರಾಮೇಗೌಡ, ಬಿಜೆಪಿ ಮುಖಂಡರಾದ ಬಲ್ಲೇನಹಳ್ಳಿ ರಮೇಶ್ ಇದ್ದರು.

## ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ ವಿತರಣೆ

ಮದ್ದೂರು : ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಲವಾರು ಅತ್ಯುನ್ನತ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡುತ್ತಿರುವುದಾಗಿ ಶಾಸಕ ಡಿ.ಸಿ.ತಮ್ಮಣ್ಣ ತಿಳಿಸಿದರು.

ಮದ್ದೂರು ಪಟ್ಟಣದ ಮಹಿಳಾ ಸರ್ಕಾರಿ ಕಾಲೇಜಿನಲ್ಲಿ ಆಯೋಜಿಸಿದ್ದ ಪದವಿ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ ವಿತರಿಸಿ ಮಾತನಾಡಿದ ಅವರು ತಾಲೂಕಿನಾದ್ಯಂತ ಕೈಗಾರಿಕಾ ತರಬೆತಿ ಸಂಸ್ಥೆ, ಪದವಿ ಕಾಲೇಜು, ಶಾಲಾ ಕಾಲೇಜುಗಳು, ಮೊರಾರ್ಜಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ತೆರೆದು ಪ್ರತಿಯೊಬ್ಬ ಮಕ್ಕಳು ಉನ್ನತ ಶಿಕ್ಷಣ ಪಡೆದು ದೇಶದ ಸತ್ಪ್ರಜೆಗಳಾಗಿ ರೂಪಗೊಳ್ಳಬೇಕೆಂಬುದೇ ತಮ್ಮ ಆಶಯವೆಂದರು.

ಸರಕಾರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದ್ದು ಇಂತಹ ಯೋಜನೆಗಳು ದುರುಪಯೋಗವಾಗದೆ ಶಿಕ್ಷಣ ಅಭಿವೃದ್ಧಿ ಹೊಂದಲು ಸಾಧ್ಯವಾಗಬೇಕೆಂದು ತಿಳಿಸಿದರಲ್ಲದೇ ಸರ್ಕಾರಿ ಶಾಲಾ, ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿದ್ದು ಸರ್ಕಾರಿ ಶಾಲೆಗಳ ಉನ್ನತೀಕರಣಕ್ಕೆ ಸರ್ಕಾರಕ್ಕೆ ಪತ್ರ ಬರೆದಿರುವುದಾಗಿ ತಿಳಿಸಿದರು.

ಕಾಲೇಜಿನಲ್ಲಿ ವ್ಯಾಸಂಗ ಮಾಡುವ 212 ಮಂದಿ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್‌ಗಳನ್ನು ವಿತರಿಸಲಾಯಿತು.

ತಹಸೀಲ್ದಾರ್ ಎಚ್.ಬಿ.ವಿಜಯಕುಮಾರ್, ಕಾಲೇಜು ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ರಾಮೇಗೌಡ, ಪ್ರಾಂಶುಪಾಲ ಪ್ರೊ. ನಟರಾಜು, ಉಪನ್ಯಾಸಕರಾದ ಪ್ರೊ.ಕೃಷ್ಣೇಗೌಡ, ಪ್ರಸಾದ್ ಹಾಜರಿದ್ದರು.

## ಅರ್ಜಿ ಆಹ್ವಾನ

ಮಂಡ್ಯ : 2021–22ನೇ ಸಾಲಿಗೆ ಪರಿಶಿಷ್ಟ ಜಾತಿ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ 2 ವರ್ಷಗಳ ತರಬೇತಿ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ.

40 ವರ್ಷದೊಳಗಿನ ಹಾಗೂ ವಾರ್ಷಿಕ ರೂ.2.50ಲಕ್ಷ ಆದಾಯದ ಮಿತಿಯಿರುವ ಅರ್ಹ ಅಭ್ಯರ್ಥಿಗಳು ಆಗಸ್ಟ್ 8 ರೊಳಗೆ ವೆಬ್‌ಸೈಟ್:sw.kar. nic.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಸದರಿ ಅರ್ಜಿಯ ಪ್ರತಿಗಳನ್ನು ಸಂಬಂಧಿಸಿದ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಗೆ ಸಲ್ಲಿಸಬಹು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

Published and Owned by : Smt ARUNA JYOTHI.B.K. From No. 292, Basaveshwara Nilaya, Basaveshwara Maarga,Kaveri Nagar, Mandya Printed by : PUTTASWAMY,9th Cross, Vinoba Road,Subash Nagar, Mandya-571401, Mandya Dist. Karnataka. Editor : ARUNA JYOTHI.B.K.